ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 23 ಜೂನ್ 13, 1982 ಬೆಲೆ 60 ಪೈಸೆ

ದೇವರಾಜ ಅರಸ್ ಅವರಿಗೆ ಶ್ರದ್ಧಾಂಜಲಿ

ಕರ್ನಾಟಕ ಕ್ರಾಂತಿ ದಳದ ಅಧ್ಯಕ್ಷರಾದ, ಇಂದಿರಾ ಗಾಂಧಿಯ ಏಕ ವ್ಯಕ್ತಿ ಸರ್ವಾಧಿಕಾರದ ವಿರುದ್ಧ ಸತತ ಹೋರಾಡುತ್ತ ಬಂದ ಹಾಗೂ ಕನಿಷ್ಟ ಕಾರ್ಯಕ್ರಮದ ತಳಹದಿಯಲ್ಲಿ ವಿರೋಧಿ ಪಕ್ಷಗಳ ಐಕ್ಯತೆಗಾಗಿ ಪ್ರಯತ್ನ ನಡೆಸುತ್ತಿದ್ದ, ಕರ್ನಾಟಕ ರಾಜ್ಯದ ಹಿಂದಿನ ಮುಖ್ಯ ಮಂತ್ರಿ ದೇವರಾಜ ಅರಸರ ಅಕಾಲಿಕ ನಿಧನಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ತನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ಕಾರ್ಮಿಕರು ಪುನಃ ಹೋರಾಟದ ಪಥದಲ್ಲಿ

"ಸಹಸ್ರಾರು ಬೀಡಿ ಕಾರ್ಮಿಕರು ಜೂನ್ 15 ರಂದು ತಮ್ಮ ಬೇಡಿಕೆಗಳಿಗಾಗಿ ಡೆಪ್ಯುಟಿ ಕಮಿಷನರರ ಆಫೀಸಿನ ಮುಂದುಗಡೆ ಪಿಕೆಟಿಂಗ್ ಮಾಡಿ ಬಂಧನಕ್ಕೊಳಗಾಗಬೇಕು" ಎಂದು ಜೂನ್ 7 ರಂದು ಮಂಗಳೂರಿನಲ್ಲಿ ನಡೆದ ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಮಜೂರರ ಸಮಾವೇಶವು ಕರೆ ಕೊಟ್ಟಿದೆ.

ಜೂನ್ 7 ರಂದು ಬೆಳಿಗ್ಗೆ ಪ್ರಾರಂಭವಾದ ಈ ಸಮಾವೇಶದಲ್ಲಿ ಜಿಲ್ಲೆಯಾದ್ಯಂತದಿಂದ ಸುಮಾರು 300 ಬೀಡಿ ಕಾರ್ಮಿಕ ಪ್ರತಿನಿಧಿಗಳು (ಹೆಚ್ಚಿನವರು ಹೆಂಗಸರು) ಪಾಲ್ಗೊಂಡಿದ್ದರು. ಅಧ್ಯಕ್ಷತೆಯನ್ನು ಕಾಂ| ಪಿ. ರಾಮಚಂದ್ರ ರಾವ್ ವಹಿಸಿದ್ದರು.

ಸಮಾವೇಶವನ್ನು ಉದ್ಘಾಟಿಸಿದ ರಾಜ್ಯ ಸಿ. ಐ. ಟಿ. ಯು. ಅಧ್ಯಕ್ಷ ಹಾಗೂ ಬೀಡಿ ಕಾರ್ಮಿಕರ ರಾಜ್ಯ ಫೆಡರೇಷನ್ನಿನ ಅಧ್ಯಕ್ಷ ಕಾಂ| ಎಸ್. ಸೂರ್ಯನಾರಾಯಣರಾವ್ ಅವರು ಬಂಟ್ವಾಳದಲ್ಲಿ ಏಪ್ರಿಲ್‌ನಲ್ಲಿ ನಡೆದ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನದಲ್ಲಿ ಕೈಗೊಂಡ ಹೋರಾಟದ ಕಾರ್ಯಕ್ರಮವನ್ನು ವಿವರಿಸಿ, ಜೂನ್ 15 ರಂದು ನಡೆಯಲಿರುವ ಪಿಕೆಟಿಂಗ್ ಕಾರ್ಯಕ್ರಮವು ಬೀಡಿ ಕಾರ್ಮಿಕರ ಚಳುವಳಿಯಲ್ಲಿ ಹೊಸದೊಂದು ಅಧ್ಯಾಯವನ್ನು ಆರಂಭಿಸಲಿದೆ ಎಂದರು.

ಅವರು ಮುಂದುವರೆದು, "ಒಮ್ಮತದ ಅಭಿಪ್ರಾಯಗಳನ್ನು ಬೀಡಿ ಮಾಲೀಕರಾಗಲೀ ಕಾಂಗ್ರೆಸ್ ಸರ್ಕಾರವಾಗಲೀ ಜಾರಿ ಮಾಡದಿರುವುದು ಮಾತ್ರವಲ್ಲ – ಕಂಟ್ರಾಕ್ಟ್ ಪದ್ಧತಿ – ಬೀಡಿ ಕಾರ್ಮಿಕರಿಂದ ವಸೂಲಿ ಮಾಡಿದ ಪ್ರಾವಿಡೆಂಟ್ ಹಣಕ್ಕೆ 1976 ರಿಂದೀಚೆಗೆ ರಶೀದಿ ಕೊಡದಿರುವದು, ಕೂಲಿ ಹೆಚ್ಚಳದ ಭಾರವನ್ನು ಕಾರ್ಮಿಕರ ಮೇಲೆ ಹೊರಿ ಹಾಕುವ ಸಲುವಾಗಿ ಸಿಕ್ಕಾಪಟ್ಟೆ ಬೀಡಿ ಎಲೆ ಎವರೇಜ್ ಹೆಚ್ಚಿಸುವುದು ಇತ್ಯಾದಿ ಅವ್ಯಾಹತವಾಗಿ ನಡೆಯುತ್ತಿದೆ. ಸರ್ಕಾರವು ಕಣ್ಮುಚ್ಚಿ ಇದನ್ನೆಲ್ಲ ನೋಡುತ್ತಿದೆಯೇ ಹೊರತು, ಯಾವುದೊಂದು ಪರಿಹಾರ ಕಾರ್ಯವನ್ನು ನಡೆಸುತ್ತಿಲ್ಲ. ಆದ್ದರಿಂದ ಪುನಃ ಸಹಸ್ರಾರು ಸಂಖ್ಯೆಯಲ್ಲಿ ರಾಜ್ಯದಾದ್ಯಂತ ಬೀಡಿ ಕಾರ್ಮಿಕರು ಹೋರಾಟಕ್ಕಿಳಿಯುವುದೊಂದೇ ರಾಜ್ಯದ ಬೀಡಿ ಕಾರ್ಮಿಕರ ಮುಂದೆ ಇರುವ ಏಕೈಕ ದಾರಿ" ಎಂದು ಕಾಂ| ಸೂರ್ಯನಾರಾಯಣರಾವ್ ವಿವರಿಸಿದರು.

ನಂತರ ಕಾಂ| ಶಂಕರ, ವಾಸುಗಟ್ಟಿ, ಪದ್ಮಾವತಿ, ಜಲಜಾಕ್ಷಿ, ಬಾಲಕೃಷ್ಣ ಶೆಟ್ಟಿ, ವೆಂಕಪ್ಪಶೆಟ್ಟಿ, ಬಾಬು ದೇವಾಡಿಗ ಮತ್ತು ಕಾಂ| ಎಚ್. ಗೋಪಾಲ ಮಾತನಾಡಿ ಜೂನ್ 15 ರಂದು ನಡೆಯಲಿರುವ ಕಾರ್ಯಕ್ರಮವನ್ನು ಯಶ

(8ನೇ ಪುಟ ನೋಡಿ)

ಲೆಬನಾನಿನ ಮೇಲೆ ಧಾಳಿ

ಪೆಲೆಸ್ತೀನಿಯನ್ ಗೆರಿಲ್ಲಾಗಳು ತನ್ನ ಒಂದಿಬ್ಬರು ರಾಜತಾಂತ್ರಿಕ ಸಿಬ್ಬಂದಿಗಳ ಮೇಲೆ ಧಾಳಿ ಮಾಡಿರುವರೆಂಬ ನೆಪವನ್ನು ಮುಂದಿಟ್ಟು, ಕದನ ವಿರಾಮವನ್ನು ಉಲ್ಲಂಘಿಸಿ ಇಸ್ರಾಯಿಲ್ ಲೆಬನಾನಿನ ಮೇಲೆ ನಗ್ನ ಅಕ್ರಮಣವನ್ನು ಮಾಡಿದೆ. ಲೆಬನಾನ್ ಮತ್ತು ಇಸ್ರಾಯಿಲ್ ಗಡಿಪ್ರದೇಶದಲ್ಲಿದ್ದ ಜಾಗತಿಕ ಸಂಸ್ಥೆಯ ಶಾಂತಿ ರಕ್ಷಣಾ ಸೈನಿಕ ನಿರೀಕ್ಷಕರನ್ನೂ ಸೈನ್ಯವನ್ನೂ ಲೆಕ್ಕಿಸದೆ ಇನ್ನೂ ಮೇಲಿನ ಸೈನ್ಯ ಲೆಬನಾನಿನೊಳಗೆ ಅಕ್ರಮಣ ನಡೆಸಿದೆ. ಶಾಂತಿ ರಕ್ಷಣಾ ಪಡೆಗಳಿಗೆ ಕೇವಲ 28 ನಿಮಿಷಗಳ ಮೊದಲು ಮಾತ್ರ ತನ್ನ ಯೋಜನೆ, ಧಾಳಿಯ ಬಗ್ಗೆ ಮುನ್ಸೂಚನೆ ನೀಡಿ ಇಸ್ರಾಯಿಲ್ ಒಳನುಗ್ಗಿದೆ. ನೆಲ, ಜಲ, ವಾಯು ಪಡೆಗಳಿಂದ ಆಕ್ರಮಣ ನಡೆಸುತ್ತಿರುವ ಇಸ್ರಾಯಿಲ್ ಈಗಾಗಲೇ ಲೆಬನಾನಿನ ರಾಜಧಾನಿ ಬೇರುಟ್ ನಗರದ ಮೇಲೆ ಧಾಳಿ ನಡೆಸುತ್ತಿರುವ ವರದಿಯಾಗಿದೆ.

ಸಂಪಾದಕೀಯ

ಲೆಬನಾನಿನ ದಕ್ಷಿಣ ಭಾಗವು ಪೆಲೆಸ್ತೀನಿಯನ್ ವಿಮೋಚನಾ ಪಡೆಗಳ ಮತ್ತು ಗೆರಿಲ್ಲಾಗಳ ಕಾರ್ಯ ಕೇಂದ್ರವಾಗಿದೆ. ಅವನ್ನು ನಾಶಪಡಿಸಿ, ಪೆಲೆಸ್ತೀನಿಯನ್ ಲಿಬರೇಷನ್ ಆರ್ಗನೈಸೇಷನ್ (ಪಿ.ಎಲ್.ಒ.) ಅನ್ನು ಇಲ್ಲದಂತೆ ಮಾಡುವುದೇ ತನ್ನ ಉದ್ದೇಶವೆಂದು ಇಸ್ರಾಯೀಲ್ ಹೇಳುತ್ತಿದೆ. ಆದರೆ ಆದರ ನಿಜವಾದ ಉದ್ದೇಶವು ಲೆಬನಾನಿನ ಭೂಪ್ರದೇಶಗಳನ್ನು ಕಬಳಿಸಿ, ಯೆಹೂದಿ ರಾಜ್ಯವನ್ನು ವಿಸ್ತರಿಸುವುದೇ ಆಗಿದೆ. ಆದರೆ ಪೆಲೆಸ್ತೀನಿಯನ್ ಜನತೆಗೆ ಆಗಿರುವ ಅನ್ಯಾಯಕ್ಕೆ ಪರಿಹಾರ ದೊರೆಯದ ತನಕ, ಪೆಲೇಸ್ತೀನಿ

(8ನೇ ಪುಟ ನೋಡಿ)

ದಿಮಿತ್ರೋವ್ ಅವರ ಜನ್ಮಶತಾಬ್ದಿ ಆಚರಿಸಲು ಪಾಲಿಟ್‌ಬ್ಯೂರೋ ಕರೆ

18ನೇ ಜೂನ್ 1982 ರಂದು ಜೋರ್ಜಿ ಡಿಮಿತ್ರೋವ್ ಅವರ ಜನ್ಮ ಶತಾಬ್ದಿಯನ್ನು ಆಚರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪಾಲಿಟ್ ಬ್ಯೂರೋ ಕರೆ ಕೊಟ್ಟಿದೆ:

ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಚಳುವಳಿಯ ಪ್ರಖ್ಯಾತ ಹಾಗೂ ಬಲ್ಗೇರಿಯಾ ಕಮ್ಯೂನಿಸ್ಟ್ ಪಾರ್ಟಿಯ ಪ್ರಖ್ಯಾತ ಮುಖಂಡರೂ, ಮಾರ್ಕ್ಸ್‌ವಾದಿ ಲೆನಿನ್ ವಾದದ ಸೈದ್ಧಾಂತಿಗಳೂ, ಅಚಲ ಶ್ರಮಜೀವಿ ಅಂತರಾಷ್ಟ್ರೀಯ ವಾದಿಗಳೂ ಎಲ್ಲ ತರದ ದಬ್ಬಾಳಿಕೆಯ ಮತ್ತು ಗುಲಾಮಗಿರಿಯ ವಿರುದ್ಧ ಪ್ರಬಲ ಹೋರಾಟಗಾರರೂ, ಸಮತಾವಾದ ಮತ್ತು ಕಮ್ಯೂನಿಸಂನ ವಿಜಯಕ್ಕಾಗಿ ಜೀವಮಾನವಿಡೀ ದಣಿಯದೇ ಕೆಲಸ ಮಾಡಿದ ದಿಮಿತ್ರೋವ್ ಅವರಿಗೆ ಪಾಲಿಟ್ ಬ್ಯೂರೋ ಶ್ರದ್ಧಾಂಜಲಿಯನ್ನರ್ಪಿಸುತ್ತದೆ.

ತನ್ನ 15ನೇ ವಯಸ್ಸಿನಲ್ಲೇ ಒಂದು ಛಾಪಖಾನೆಯಲ್ಲಿ ಕಾರ್ಮಿಕನಾಗಿ ಸೇರಿ, ದಿಮಿತ್ರೋವ್ ಅವರು 1902ರಲ್ಲಿ ಬಲ್ಗೇರಿಯಾ ಸೋಶಿಯಲ್ ಡೆಮೋಕ್ರಾಟಿಕ್ ಪಾರ್ಟಿಯನ್ನು ಸೇರಿದರು. ಮರು ವರ್ಷ ಸೋಶಿಯಲ್ ಡೆಮೋಕ್ರಾಟಿಕ್ ಪಾರ್ಟಿ ಇಬ್ಭಾಗವಾದಾಗ ಅದರ ಕ್ರಾಂತಿಕಾರಿ ಅಂಗವಾದ "ಎಡ ಪಂಥೀಯ ಸೋಶಲಿಸ್ಟ"ರನ್ನು ಸೇರಿದರು. ಕ್ರಾಂತಿಕಾರ ಎಡ ಪಂಥೀಯ ಸೋಶಲಿಸ್ಟರ ಸಂಕುಚಿತ ವಾದವನ್ನು ಅವರು ಬಲವಾಗಿ ಅಲ್ಲಗಳೆದರೂ ಕೂಡ, 1909 ರಲ್ಲಿ ಎಡ ಪಂಥೀಯ ಸೋಶಲಿಸ್ಟರ ಸೋಶಿಯಲ್ ಡೆಮೋಕ್ರಾಟಿಕ್ ಪಾರ್ಟಿಯ ಕೇಂದ್ರ ಸಮಿತಿಯ ಸದಸ್ಯರನ್ನಾಗಿ ದಿಮಿತ್ರೋವ್ ಅವರನ್ನು ಆರಿಸಲಾಯಿತು. 1909 ರಿಂದ 1923 ರವರೆಗೆ ಇವರು ಬಲ್ಗೇರಿಯಾದ ಕ್ರಾಂತಿಕಾರಿ ಕಾರ್ಮಿಕ ಸಂಘಗಳ ಕೇಂದ್ರ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು. 1913 ರಿಂದ 1923 ವರೆಗೆ ಇವರು ಬಲ್ಗೇರಿಯದ ಲೋಕ ಸಭೆಯಲ್ಲಿ ಪ್ರತಿನಿಧಿಯಾಗಿದ್ದರು.



ಜೋರ್ಜಿ ದಿಮಿತ್ರೋವ್

ಸಾಮ್ರಾಜ್ಯಶಾಹಿಯ ಮೊದಲನೇ ಮಹಾ ಯುದ್ಧದ ವಿರುದ್ಧ ಇವರ ಚಟುವಟಿಕೆಗಳಿಗಾಗಿ ಇವರನ್ನು ಬಂಧನದಲ್ಲಿಡಲಾಯಿತು. ಯುದ್ಧದ ನಂತರದ ಪ್ರಥಮ ಆಂದೋಲನವಾದ 1919-ರ ರೇಲ್ವೆ ಕಾರ್ಮಿಕರ ಧೀರ ಹೋರಾಟಕ್ಕೆ ಮುಖಂಡತ್ವ ನೀಡಿದರು. 1923 ಜೂನ್ ತಿಂಗಳಲ್ಲಿ ಫ್ಯಾಸಿಸ್ಟರು ಬಲ್ಗೇರಿಯಾದಲ್ಲಿ ಸೈನಿಕ ಕ್ರಾಂತಿ ಮಾಡಿದರು. ಅದೇ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ವಸಿಲ್ ಕೊಲೋರೊವ್ ಅವರ ಜೊತೆಯಲ್ಲಿ ಸೇರಿಕೊಂಡು ದಿಮಿತ್ರೋವ್ ಇವರು ಫಾಸಿಸ್ಟ ವಿರೋಧಿ ಕ್ರಾಂತಿಯ ಮುಖಂಡತ್ವ ವಹಿಸಿದರು. ಅತ್ಯಂತ ದಮನಕಾರಿ ರೀತಿಯಲ್ಲಿ ಈ ಕ್ರಾಂತಿಯನ್ನು ಹತ್ತಿಕ್ಕಲಾಯಿತು. ಅಳಿದುಳಿದ ಗುಂಪುಗಳನ್ನು ದಿಮಿತ್ರೋವ್ ಅವರು ಒಟ್ಟು ಸೇರಿಸಿ ಗುಪ್ತ ಸ್ಥಳಕ್ಕೆ ಒಯ್ದರು. ಫ್ಯಾಸಿಸ್ಟ ಆಡಳಿತೆ ಇವರ ನಾಗರಿಕತ್ವವನ್ನು ಕಡಿಮೆ ಮಾಡಿ, ಎರಡು ಮರಣ ದಂಡನೆಗಳನ್ನು ವಿಧಿಸಿತು. ಅಂದಿನಿಂದ ಇವರು ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್ಲಿನ ಕಾರ್ಯಕಾರೀ ಸಮಿತಿ ಸದಸ್ಯರಾಗಿ ಕೆಲಸ ಮಾಡಿದರು.

ಕಮ್ಯೂನಿಸ್ಟ್ ಇಂಟರ್ ನ್ಯಾಷನಲ್ ಪರವಾಗಿ ಅತಿ ಮಹತ್ವದ ಕಾರ್ಯ ಒಂದರಲ್ಲಿ ತೊಡಗಿರುವಾಗ 1933 ಫೆಬ್ರವರಿಯಲ್ಲಿ ನಾಝಿಗಳು ಇವರನ್ನು ಬಂಧಿಸಿ ರೇಚ್‌ಸ್ಟಾಗ್ ಬೆಂಕಿ ಅನಾಹುತದ ಖಟ್ಲೆಯಲ್ಲಿ ಇವರನ್ನು ಸೇರ್ಪಡೆ ಮಾಡಿದರು. ಕೋರ್ಟಿನಲ್ಲಿ ಕೂಡ ಇವರು ನಾಝಿಜಮನ್ನು ಬಲವಾಗಿ

"ಚರಿತ್ರೆಯ ಚಕ್ರ ತಿರುಗುತ್ತಿದೆ. ...ಜೈಲು ವಾಸವಾಗಲೀ, ಮರಣ ದಂಡನೆಯಾಗಲೀ ಅದನ್ನು ತಡೆಯಲು ಸಾಧ್ಯವಿಲ್ಲ. ಅದು ತಿರುಗುತ್ತಾ ಇದೆ, ಕಮ್ಯುನಿಸಂಮಿನ ಅಂತಿಮ ವಿಜಯಕ್ಕಾಗಿ ಅದು ತಿರುಗುತ್ತಿದೆ."

(8ನೇ ಪುಟ ನೋಡಿ)

ಪಶ್ಚಿಮ ಬಂಗಾಲ ಎಡ ಮತ್ತು ಪ್ರಜಾಪ್ರಭುತ್ವವಾದಿ ರಂಗದ ಭಾರಿ ಗೆಲುವು

ಪಶ್ಚಿಮ ಬಂಗಾಲದ ವಿಧಾನ ಸಭೆಗೆ ಮೇ 19 ರಂದು ನಡೆದ ಚುನಾವಣೆಗಳಲ್ಲಿ ಅಲ್ಲಿನ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಒಕ್ಕೂಟವು (ಎಡರಂಗ) ಒಟ್ಟು ಸ್ಥಾನಗಳ ಮೂರನೆ–ಎರಡರಷ್ಟು (ಹತ್ತಿರ ಹತ್ತಿರ ಐದನೇ–ನಾಲ್ಕರಷ್ಟು) ಸ್ಥಾನಗಳನ್ನು ಗಳಿಸಿ, ಅಲ್ಲಿನ ಜನತೆ ಎಡರಂಗದ ಸರ್ಕಾರದಲ್ಲಿ ಇಟ್ಟಿರುವ ನಂಬಿಕೆಯನ್ನು ಮತ್ತೊಮ್ಮೆ ಧೃಡಪಡಿಸಿದೆ. ಒಟ್ಟು 294 ಸ್ಥಾನಗಳಲ್ಲಿ ಎಡರಂಗವು 238 ಸ್ಥಾನಗಳಲ್ಲಿ ಜಯಗಳಿಸಿದರೆ, ಕಾಂಗ್ರೆಸ್ (ಐ), ಕಾಂಗ್ರೆಸ್ (ಎಸ್) ಮತ್ತು ಇತರ ವಿರೋಧಿ ಪಕ್ಷಗಳು ಕೇವಲ 56 ಸ್ಥಾನಗಳನ್ನು ಮಾತ್ರ ತಮ್ಮದನ್ನಾಗಿಸಿಕೊಂಡಿವೆ.

ಅಪ್ರತಿಮ ಗೆಲುವು :

ಕಾಂಗ್ರೆಸ್ (ಐ) ಮತ್ತು ಅದರೊಟ್ಟಿಗೆ ಹೊಂದಾಣಿಕೆ ಮಾಡಿಕೊಂಡಿದ್ದ ಪಕ್ಷಗಳು ಒಂದು ಸ್ಥಾನವನ್ನೂ ಸಹ ಗೆಲ್ಲಲಾರದ ಹಾಗೆ 5 ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಎಡರಂಗವು ಗೆದ್ದು ಬಂದಿದೆ. ಎಡರಂಗದ ವಿರೋಧಿ ಮತಗಳನ್ನು ಕಾಂಗ್ರೆಸ್ (ಐ) ಪಕ್ಷವು ಗಳಿಸಿದೆ.

ಮಹತ್ತರವಾದ ತೀರ್ಪನ್ನು ಕೊಟ್ಟಿರುವ ರಾಜ್ಯದ ಜನತೆಯನ್ನು ಅಭಿನಂದಿಸುತ್ತಾ, ಎಡರಂಗದ ಅಧ್ಯಕ್ಷ ಪ್ರಮೋದ್‌ದಾಸ್‌ಗುಪ್ತ ಅವರು "ಈಗ ರಾಜ್ಯ ಸರ್ಕಾರದ ಜವಾಬ್ದಾರಿ ಹೆಚ್ಚಿದೆ" ಎಂದು ಹೇಳುತ್ತಾ, ರಾಜ್ಯದಲ್ಲಿ ಜನರು ನಡೆಸುತ್ತಿರುವ ವಿಜಯೋತ್ಸವದ ಸಭೆ ಹಾಗೂ ಮೆರವಣಿಗೆಗಳನ್ನು ಶಾಂತ ರೀತಿಯಿಂದ ನಡೆಸುವಂತೆ ಮನವಿ ಮಾಡಿಕೊಂಡಿದ್ದಾರೆ. ಈಗಾಗಲೇ ಸಣ್ಣ ಸಣ್ಣ ಹಳ್ಳಿ ಹಾಗೂ ಪಟ್ಟಣಗಳಲ್ಲಿ ಜನರು ಉತ್ಸಾಹದಿಂದ ಎಡರಂಗದ ವಿಜಯೋತ್ಸವದ ಮೆರವಣಿಗೆ ಹಾಗೂ ಸಭೆಗಳನ್ನು ನಡೆಸುತ್ತಿದ್ದಾರೆ. ಜೂನ್ ಮೊದಲನೇ ವಾರದಲ್ಲಿ ಕಲ್ಕತ್ತಾ ನಗರದಲ್ಲಿ ಅತ್ಯಂತ ಪ್ರಮುಖವಾದ ಹಾಗೂ ಆಕರ್ಷಣೀಯವಾದ ಮೆರವಣಿಗೆಯು ನಡೆದಿದೆ.

ಕಾಂಗ್ರೆಸ್ (ಐ) ನ ಗೂಂಡಾಗಿರಿ :

ಪ್ರಜಾಪ್ರಭುತ್ವವನ್ನು ಧಿಕ್ಕರಿಸುವುದು ತಮ್ಮ ಅಭ್ಯಾಸವೋ ಎಂಬಂತೆ ಕಾಂಗ್ರೆಸ್ (ಐ) ನ ಗೂಂಡಾಗಳು ಶಾಂತಿ ಮತ್ತು ಉತ್ಸಾಹದಿಂದ ಎಡರಂಗದ ವಿಜಯೋತ್ಸವವನ್ನು ಆಚರಿಸುತ್ತಿರುವ ಜನರ ಮೇಲೆ ತಮ್ಮ ಎಂದಿನ ದಾಳಿಯನ್ನು ಆರಂಭಿಸಿದ್ದಾರೆ. ಈ ರೀತಿಯ ಘರ್ಷಣೆಯ ವರದಿಗಳು ಪೂರ್ವ ಹಾಗೂ ಉತ್ತರ ಕಲ್ಕತ್ತಾ, ಹೂಗ್ಲಿ ಹಾಗೂ ಪಶ್ಚಿಮ ದಿನಾಜ್‌ಪುರಗಳಿಂದ ಬಂದಿದೆ.

"ಕಲ್ಕತ್ತಾ ನಗರ" ಫಲಿತಾಂಶಗಳು :

ಕಲಕತ್ತಾ ನಗರದ ಒಟ್ಟು 22 ಸ್ಥಾನಗಳನ್ನು ಸಮವಾಗಿ ಎಡರಂಗ ಮತ್ತು ಕಾಂಗ್ರೆಸ್ (ಐ) ಪಕ್ಷಗಳು ಹಂಚಿಕೊಂಡಿವೆ. ಜನತಾ ಪಕ್ಷವು 1977ರ ಚುನಾವಣೆಯಲ್ಲಿ ಗಳಿಸಿದ್ದ ಕಲಕತ್ತಾ ನಗರದ ಎಲ್ಲಾ ನಾಲ್ಕು ಸ್ಥಾನಗಳನ್ನೂ ಕಾಂಗ್ರೆಸ್ (ಐ) ಗೆ ಒಪ್ಪಿಸಿದೆ. ಹಾಗೆ ನೋಡಿದರೆ, ಜನತಾ ಪಕ್ಷವು ಇಡೀ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಅಪಜಯ ಅನುಭವಿಸಿ, ಹಿಂದೆ ತಾನು ಗಳಿಸಿದ್ದ ಎಲ್ಲಾ ಸ್ಥಾನಗಳನ್ನು ಕಾಂಗ್ರೆಸ್ (ಐ) ಮತ್ತು ಅದರ ಮಿತ್ರ ಪಕ್ಷಗಳಿಗೆ ಬಿಟ್ಟುಕೊಟ್ಟಿದೆ. ಇಂತಹ ಸಮಯದಲ್ಲೂ ಸಹ, ಕಲಕತ್ತಾ ನಗರದಲ್ಲಿ ಎಡರಂಗವು ಒಟ್ಟು 4,50,792 ಮತಗಳನ್ನು ಹಾಗೂ ಕಾಂಗ್ರೆಸ್ (ಐ) 309123 ಮತಗಳನ್ನು ಪಡೆದು ಎಡರಂಗವು 141669 ಹೆಚ್ಚು ಮತಗಳನ್ನು ಪಡೆದು ವಿಜಯಿಯಾಗಿದೆ.

"ಎಡರಂಗವು ಸಾಧಿಸಿರುವ ವಿಜಯವು, ನಮ್ಮ ಹೊಣೆಗಾರಿಕೆಯನ್ನು ಸಹ ಹೆಚ್ಚಿಸಿದೆ. ಕೆಲವು ವರ್ಗದ ಜನರಲ್ಲಿ ಅತೃಪ್ತಿಯೂ ಸಹ ಹೆಚ್ಚಾಗಿಯೇ ಇರಬಹುದು. ಶಾಸಕಾಂಗದ ಹೆಸರಿನಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳ ಮೇಲೆ ಹೇರುತ್ತಿರುವ ನಿರ್ಭಂದದಲ್ಲಿ, ಎಡರಂಗದ ಸರ್ಕಾರಗಳು ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುವುದು ಬಲು ಕಷ್ಟಕರವಾದ ಕೆಲಸ. ಆದ್ದರಿಂದ, ಇನ್ನು ಮುಂದೆ ಎಡರಂಗವು ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸುತ್ತಾ, ಅವರಲ್ಲಿ ಹೆಚ್ಚು ಹೆಚ್ಚು ರಾಜಕೀಯ ತಿಳುವಳಿಕೆಯನ್ನು ಕೊಡಲು ಶ್ರಮಿಸುತ್ತದೆ" ಎಂದು ಎಡರಂಗದ ಅಧ್ಯಕ್ಷ ಪ್ರಮೋದ್ ದಾಸ್‌ಗುಪ್ತರವರು ಕಲಕತ್ತಾದಲ್ಲಿ ಪತ್ರಿಕಾ ವೃಂದವನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದರು.

ಬರದ್ವಾನ್ (26 ಸ್ಥಾನಗಳು), ನಾಡಿಯ (15), ಜಲಪೈಗುರಿ (12), ಕೂಚ್‌ಬೆಹಾರ್ (9) ಮತ್ತು ಡಾರ್ಜಲಿಂಗ್ (5) ಈ 5 ಜಿಲ್ಲೆಗಳಲ್ಲಿ ಕಾಂಗ್ರೆಸ್ (ಐ) ಒಂದು ಸ್ಥಾನವನ್ನೂ ಸಹ ಗಳಿಸಲಾರದೆ ಭಾರಿ ಸೋಲನ್ನು ಅನುಭವಿಸಿದೆ. ಆದರೆ ಎಡರಂಗವು ಈ 5 ಜಿಲ್ಲೆಗಳಲ್ಲಿ ಒಟ್ಟು 66 ಸ್ಥಾನಗಳಲ್ಲಿ ಗೆದ್ದರೆ, ಡಾರ್ಜಲಿಂಗ್‌ನಲ್ಲಿ ಒಂದು ಸ್ಥಾನವನ್ನು ಗೂರ್ಖಾಲೀಗ್ ಪಕ್ಷವು ಸಂಪಾದಿಸಿಕೊಂಡಿದೆ. ಜನತಾ ಪಕ್ಷ ಮತ್ತು ಮತೀಯ ಪಕ್ಷಗಳಾದ ಬಾಜಪ, ಮುಸ್ಲಿಂ ಲೀಗ್, ಜಾರ್ ಖಂಡ್ ಮೋರ್ಚಾ ಪಕ್ಷಗಳು ಇಡೀ ರಾಜ್ಯದಲ್ಲಿ ಯಾವ ಒಂದು ಸ್ಥಾನದಲ್ಲೂ ಗೆಲ್ಲದೆ, ಜನರಿಂದ ತಿರಸ್ಕೃತವಾಗಿವೆ.

ಕಲಕತ್ತಾ ನಗರದಲ್ಲಿ ಈ ಬಾರಿ ಕೆಲವು ಪ್ರಮುಖ ಮಂತ್ರಿಗಳು ಸೋತಿದ್ದಾರೆ. ಇದಕ್ಕೆ ಕಾರಣ ನಗರದ ಮುಖ್ಯ ಸಮಸ್ಯೆಯಾಗಿದ್ದ ವಿಧ್ಯುಶ್ಚಕ್ತಿ ಕೊರತೆಯೋ ಅಥವಾ ಎಡರಂಗ ಜಾರಿಗೆ ತಂದ ಶಿಕ್ಷಣ ಪದ್ಧತಿ ಸೂತ್ರ ಮತ್ತು ಸಂಚಯಿತಾ ಮೊಕದ್ದಮೆ ಕಾರಣವೆ ? ಎಂದು ಎಡರಂಗದ ಅಧ್ಯಕ್ಷ ಪ್ರಮೋದ್‌ದಾಸ್‌ಗುಪ್ತರವರನ್ನು ಪತ್ರಿಕಾ ವರದಿಗಾರರು ಕೇಳಿದಾಗ, "ಈ ರೀತಿ ನಮ್ಮ ಚುನಾವಣಾ ಫಲಿತಾಂಶಗಳನ್ನು ಜನರ ಸಮಸ್ಯೆಗಳ ಸೀಮಿತ ಪರಧಿಯಲ್ಲಿ ನೋಡಿ ಹೇಳಲು ಸಾಧ್ಯವಿಲ್ಲ; ಅಥವಾ ಈ ಸಮಸ್ಯೆಗಳು ಯಾವ ಮತ ಕ್ಷೇತ್ರದಲ್ಲಿ, ಈ ಚುನಾವಣೆಯಲ್ಲಿ ಸೋತಿರುವ ಹಿಂದಿನ ಮಂತ್ರಿ ಮಂಡಲದ ಯಾವ ಮಂತ್ರಿಯ ಮೇಲೆ ಪ್ರಭಾವ ಬೀರಿದೆ ಎಂದು ಹೇಳಲೂ ಸಾಧ್ಯವಿಲ್ಲ; ಆದರೂ ಎರಡನೇ ಬಾರಿಗೆ ಎಡರಂಗವು ಅಧಿಕಾರಕ್ಕೆ ಬಂದಿರುವುದರಿಂದ, ಜನರ ಸಾಮಾನ್ಯ ಸಮಸ್ಯೆಗಳಿಗೆ ಹೆಚ್ಚು ಗಮನ ಕೊಡಬೇಕಾಗಿದೆ; ಜನರು ನಮ್ಮನ್ನು ಎರಡನೆ ಬಾರಿಗೆ ಅಧಿಕಾರಕ್ಕೆ ತಂದಿರುವುದು, ಅವರಿಗೆ ನಾವು ಕಳೆದ ಬಾರಿ ನೀಡಿದ ಹೊಸ ಶಿಕ್ಷಣ ಪದ್ಧತಿಯು ಒಪ್ಪಿಗೆಯಾಗಿದೆ ಎಂಬುದರ ಸೂಚ್ಯಕ" ಎಂದು ಹೇಳಿದರು.

ಡೈಮಂಡ್ ಹಾರ್‌ಬರ್ ಕ್ಷೇತ್ರ :

ಹಿರಿಯ ಕಾ॥ ಜ್ಯೋತಿರ್ಮಯಿ ಬಸು ಅವರ ನಿಧನದಿಂದ ತೆರವಾಗಿದ್ದ ಈ ಲೋಕಸಭಾ ಕ್ಷೇತ್ರವನ್ನು ಸಿ.ಪಿ.ಐ. (ಎಂ)ನ ಅಮುಲ್‌ದತ್ತಾ ಅವರು ತಮ್ಮ ಕಾಂಗ್ರೆಸ್ [ಐ] ಎದುರಾಳಿಗಿಂತ 116,223 ಹೆಚ್ಚು ಮತಗಳನ್ನು ಗಳಿಸಿ ಗೆದ್ದು, ಬೇರೆ ಪಕ್ಷಕ್ಕೆ ಈ ಕ್ಷೇತ್ರದ ಪ್ರಾತಿನಿಧ್ಯ ಹೋಗದ ಹಾಗೆ ರಕ್ಷಿಸಿದ್ದಾರೆ.

●

ವಸಾಹತುಶಾಹಿ ಉಳಿಸಲು ಇಂಗ್ಲೆಂಡಿನ ಪ್ರಯತ್ನ

ಫಾಕ್‌ಲ್ಯಾಂಡ್ ದ್ವೀಪವನ್ನು ವಶಪಡಿಸಿಕೊಳ್ಳುವುದರ ಸಲುವಾಗಿ ಇಂಗ್ಲೆಂಡ್ ದಕ್ಷಿಣ ಅಟ್ಲಾಂಟಿಕ್ಕಿಗೆ ಹೋರಾಡುವ ಸೈನ್ಯ ಕಳುಹಿಸಿಕೊಟ್ಟಿರುವುದರ ಉದ್ದೇಶವೇನೆಂದರೆ, ತಮ್ಮ ಆಳಿದುಳಿದ ಅಲ್ಪ ವಸಾಹತುಗಳನ್ನು ಉಳಿಸಿಕೊಳ್ಳುವ ದುರುದ್ದೇಶದಿಂದೆಂಬುದನ್ನು ಸ್ಪಷ್ಟಪಡಿಸುತ್ತದೆ.

ಪ್ರಾರಂಭದಲ್ಲಿ ಈ ಸಮಸ್ಯೆಯನ್ನು ಸೌಹಾರ್ದಯುತವಾಗಿ ಬಗೆಹರಿಸಲಾಗುವುದೆಂದು ವರ್ತಿಸಿದ ಅಮೇರಿಕ, ಅರ್ಜಂಟೈನಾದ ಮೇಲೆ ಆರ್ಥಿಕ ಹಾಗೂ ಸೈನಿಕ ದಿಗ್ಬಂಧನ ಹೇರಿ, ಇಂಗ್ಲೆಂಡಿಗೆ ಸಹಾಯ ಮಾಡುತ್ತಿದೆ. ನಾಟೋ ಒಕ್ಕೂಟದ ಸದಸ್ಯನಾದ ಬ್ರಿಟನ್ನಿನ ಕೂಡ ಇರುವ ಸಂಬಂಧಕ್ಕೆ ತಾನು ಹೆಚ್ಚು ಮಹತ್ವ ಕೊಡುತ್ತೇನೆಂದು ಅಮೇರಿಕ ಹೇಳಿಕೆ ನೀಡಿ, ವಸಾಹತು ಶಾಹಿಯನ್ನು ನಿರ್ಮೂಲನೆ ಮಾಡುವುದಕ್ಕೆ ತಾವು ಅಲ್ಪ ಮಹತ್ವ ನೀಡುತ್ತೇನೆಂಬುದನ್ನು ತೋರ್ಪಡಿಸಿದೆ.

ಅರ್ಜಂಟೈನಾದ ಸುತ್ತ ವಾಯು ಮತ್ತು ವಿಮಾನ ದಿಗ್ಬಂಧನ, ಫಾಕ್‌ಲ್ಯಾಂಡಿನ ಮೇಲೆ ವಾಯು ದಾಳಿ, ಸೈನಿಕ ಪ್ರವೇಶವನ್ನೆಲ್ಲ ನೋಡುವಾಗ, ಕೇಂದ್ರ ಅಮೇರಿಕಾದ ರಾಜ್ಯಗಳ ಆಂತರಿಕ ವ್ಯವಹಾರದಲ್ಲಿ ಅಮೇರಿಕ ನೇರವಾದ ಕೈವಾಡ ನಡೆಸಿದೆಂಬುದು ಸ್ಪಷ್ಟವಾಗಿದೆ. ಇಡೀ ಸಾಮ್ರಾಜ್ಯಶಾಹಿಗಳ ಸೈನಿಕ ಕಾರ್ಯಾಚರಣೆ ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ಹದಗೆಡಿಸಿದೆ.

ಬ್ರಿಟನ್ನಿನಿಂದ 13,000 ಕಿಲೋಮೀಟರ್ ದೂರದಲ್ಲಿರುವ, 1800 ಜನರೂ, 750,000 ಕುರಿಗಳಿರುವ ಅತಿ ಚಿಕ್ಕ ದ್ವೀಪಗಳ ಸಮುದಾಯದ ಕುರಿತು ಹಡಗು, ವಿಮಾನ, ಸೈನಿಕ ಕಾರ್ಯಾಚರಣೆ ನಡೆದಿದೆ.

ಈ ರೀತಿ ಸಾಮ್ರಾಜ್ಯತಾಹಿಗಳು ಬಲಪ್ರಯೋಗ ಮಾಡುತ್ತಿದ್ದಾಗ, ಅವರ ವಸಾಹತುಶಾಹಿ ನೀತಿ ಮತ್ತು ಬಲಪ್ರಯೋಗದ ವಿರುದ್ಧ ಜಗತ್ತಿನಲ್ಲಿ ಅಭಿಪ್ರಾಯ ಮೂಡುತ್ತಿದೆ. ಫಾಕ್‌ಲ್ಯಾಂಡ್ ಪ್ರಕರಣದಲ್ಲಿ ಬಲಪ್ರಯೋಗವನ್ನು ಖಂಡಿಸುತ್ತಾ ರಷ್ಯಾ ದೇಶದ ಅಧ್ಯಕ್ಷ ಬ್ರಿಜನೆವ್‌ರವರು ಇದು ವಸಾಹತುಶಾಹಿಯ ಗುಂಡಾಗಿರಿಯನ್ನು ತೋರ್ಪಡಿಸುತ್ತದೆಂದು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ.

"ಕೇಂದ್ರ ಅಮೇರಿಕದಲ್ಲೆ ಇರಲಿ, ದಕ್ಷಿಣ ಅಟ್ಲಾಂಟಿಕ್‌ನಲ್ಲೇ ಇರಲಿ ತಮ್ಮ ಭೂಮಿಗೆ ತಾವೇ ಮಾಲಕರಾಗಬೇಕೆಂದು ಜನ ಇಚ್ಛೆಪಡುತ್ತಿದ್ದಾರೆ. ಸಾಮ್ರಾಜ್ಯಶಾಹಿಗಳು ಬರೀ ದಿಗ್ಬಂಧನ ಹೇರುವುದರಲ್ಲಿ, ಮೋಸ ಮಾಡುವುದರಲ್ಲಿ, ಒತ್ತಾಯ ತರುವುದರಲ್ಲಷ್ಟೆ ಅಥವಾ ಶಸ್ತ್ರಾಸ್ತ್ರಗಳನ್ನುಪಯೋಗಿಸುವುದರಲ್ಲೇ ತೃಪ್ತಿಗೊಳ್ಳದೆ, ಹಿಂದಿನ ಕಾಲದ "ವಸಾಹತುಶಾಹಿ ಗುಂಡಾಗಿರಿ" ಅನುಕರಿಸುತ್ತಿದ್ದಾರೆ.

ಇದೇ ರೀತಿ, ಸಂಯುಕ್ತ ರಾಷ್ಟ್ರ ಸಂಘದಲ್ಲಿರುವ ಚೀನಾ ದೇಶದ ಕಾಯಂ ಪ್ರತಿನಿಧಿಯು ಬ್ರಿಟನ್ನಿನ ಕ್ರಮವನ್ನು ಬೆಂಬಲಿಸುವುದಿಲ್ಲೆಂದು ಹೇಳಿದ್ದಾರೆ.

ತಟಸ್ಥ ರಾಷ್ಟ್ರಗಳ ಪತಿಯಿಂದ 37 ರಾಷ್ಟ್ರಗಳ ಸಂಯುಕ್ತ ಕಮಿಟಿ ಕೂಡ ಫಾಕ್‌ಲ್ಯಾಡ್ ದ್ವೀಪದ ಕುರಿತು ಉಂಟಾಗಿರುವ ಬಿಕ್ಕಟ್ಟಿಗೆ ತನ್ನ ಚಿಂತೆ ವ್ಯಕ್ತಪಡಿಸಿ, ಬ್ರಿಟನ್ ಮತ್ತು ಅರ್ಜಂಟೈನಾ ತಮ್ಮೊಳಗೆ ಈ ಸಮಸ್ಯೆಯನ್ನು ಶಾಂತ ರೀತಿಯಿಂದ ಬಗೆಹರಿಸಿಕೊಳ್ಳಬೇಕೆಂದೂ ಹೇಳಿ, ವಸಾಹತುಶಾಹಿಯನ್ನು ಕೊನೆಗೊಳಿಸುವ ಹೋರಾಟಕ್ಕೆ ತಟಸ್ಥ ರಾಷ್ಟ್ರಗಳ ಬೆಂಬಲ ಸದಾಕಾಲವಿದೆಂಯುಬುದನ್ನು ಒತ್ತಿಹೇಳಿದೆ. ಫಾಕ್‌ಲ್ಯಾಂಡ್ ದ್ವೀಪಗಳ ಸಾರ್ವಭೌಮತ್ವವನ್ನು ಅರ್ಜಂಟೈನಕ್ಕೆ ಒಪ್ಪಿಸಬೇಕೆಂದು ತಟಸ್ಥ ರಾಷ್ಟ್ರಗಳು 1975 ರಲ್ಲೇ ಬ್ರಿಟನ್ನಿಗೆ ತಿಳಿಸಿವೆ. ಲ್ಯಾಟಿನ್ ಅಮೇರಿಕದ ದೇಶಗಳೂ ಅರ್ಜಂಟೈನದ ಕ್ರಮಕ್ಕೆ ಬೆಂಬಲ ತೋರಿಸಿವೆ.

ಅರ್ಜಂಟೈನದ ಹಡಗನ್ನು ಮುಳುಗಿಸಿ ನೂರಾರು ಜನರು ಸಾವಿಗೀಡಾದ ಕೂಡಲೇ ಬ್ರಿಟನ್ನಿಗೆ ಬೆಂಬಲಕೊಟ್ಟಿದ್ದ 10 ರಾಷ್ಟ್ರಗಳು, ತಮ್ಮ ನಿಲುವೆಯನ್ನು ಬದಲಿಸಿವೆ. ಬ್ರಿಟನ್ನಿನ ಲೇಬರ್ ಪಾರ್ಟಿ ತನ್ನ ಉಗ್ರ ಪ್ರತಿಭಟನೆ ತೋರಿಸಿ, ಬ್ರಿಟನ್ನಿನ ವಾಯುದಳ ಸೈನಿಕರನ್ನೆಲ್ಲ ವಾಪಸ್ ತರಿಸಬೇಕೆಂಬ ಬೇಡಿಕೆ ಮಂಡಿಸಿದೆ.

ಅಮೇರಿಕದ ರೇಗನ್ ಆಡಳಿತೆಯ ಬೆಂಬಲ ಪಡೆದ ಬ್ರಿಟೀಷ್ ಟೋರಿ ಸರಕಾರ ಜಗತ್ತಿನ ಈ ಪತಿಕ್ರಿಯೆಗಳನ್ನು ಅಲಕ್ಷಿಸುತ್ತಿದೆ ಸಂಯುಕ್ತ ರಾಷ್ಟ್ರ ಸಂಘದ ನಿರ್ಣಯದ ಪ್ರಕಾರ ಫಾಕ್‌ಲ್ಯಾಂಡ್ ದ್ವೀಪವನ್ನು ಅರ್ಜಂಟೈನಾಕ್ಕೆ ಒಪ್ಪಿಸಿಕೊಡಲು ಅದು ನಿರಾಕರಿಸುತ್ತಿದೆ. ವಸಾಹತುಶಾಹಿ ನೀತಿಯನ್ನು ಮುಂದುವರಿಸುತ್ತಿದೆ. ಇದರ ವಿರುದ್ಧ ಜನಾಭಿಪ್ರಾಯ ನಿರ್ಮಿಸುವುದು ಅತ್ಯಗತ್ಯ.

○

ಕೇರಳ ಚುನಾವಣೆ ಫಲಿತಾಂಶಗಳ ವಿಶ್ಲೇಷಣೆ

— ಇ. ಎಂ. ಎಸ್ ನಂಬೂದರಿಪಾಡ್

"ವಿಜಯ ಆದರೆ" ಎಂಬುದು 'ಮನೋರಮಾ ಪತ್ರಿಕೆ'ಯಲ್ಲಿ ಚುನಾವಣಾ ಫಲಿತಾಂಶಗಳ ಕುರಿತು ಅಂದಾಜುಮಾಡಿದ ಲೇಖನದ ಶೀರ್ಷಿಕೆಯಾಗಿತ್ತು.

ಫಲಿತಾಂಶಗಳ ಪ್ರಕಟಣೆಯ ಬೆನ್ನಿನಲ್ಲಿ ಈ ಲೇಖಕನು ಬರೆಯುತ್ತಿದ್ದುದರಿಂದಾಗಿ ಅವನು ಇನ್ನು ಆಳವಾಗಿ ಜಿಲ್ಲಾವಾರು ಮತ್ತು ಕ್ಷೇತ್ರವಾರು ಅಂಕೆ ಸಂಖ್ಯೆಗಳ ಅಭ್ಯಾಸವನ್ನು ಮಾಡಿರಲಿಕ್ಕಿಲ್ಲ. ಆದರೆ ಅವನಿಗೆ ಒಂದಂಶವಂತು ಕಾಂಗ್ರೆಸ್ಸ್ (ಐ) ನೇತೃತ್ವದ ಸಂಯುಕ್ತ ಪ್ರಜಾಪ್ರಭುತ್ವ ರಂಕ್ಕೆ ದೊರಕಿದ ಸ್ಪಷ್ಟ ಬಹುಮತವು ಅದರ ಮುಂದಾಳು ನಿರೀಕ್ಷಿಸಿದಷ್ಟು ನಿರ್ಣಯಕವಾಗಿಲ್ಲವೆಂಬು ಖಚಿತವಾಗಿತ್ತು.

ಯು.ಡಿ.ಎಫ್. ಮುಂದಾಳುಗಳಿಗೆ 'ರಾಜಕೀಯ ಸಲಹೆ' ಕೊಡುತ್ತಿದ್ದ ಒಬ್ಬನಿಂದ ಈ ಅಭಿಪ್ರಾಯವು ಬಂದಿರುವುದರಿಂದ ಇದಕ್ಕೆ ಬಹಳ ಮಹತ್ವವಿದೆ.

ಅಂತಹ ಪ್ರತಿಕ್ರಿಯೆಗಳು ಎಡ ಪ್ರಜಾಪ್ರಭುತ್ವ ರಂಗಕ್ಕೆ ಯಾವುದೇ ರೀತಿಯಲ್ಲಿ ಸ್ನೇಹಪರವಾಗಿರದ 'ಮಾತೃಭೂಮಿ' ಮತ್ತಿತರ ಪತ್ರಿಕೆಗಳಲ್ಲೂ ಪ್ರಕಟವಾದವು. ಈ ಪತ್ರಿಕೆಗಳ ಸಂಪಾದಕೀಯಗಳು ಮತ್ತು ರಾಜಕೀಯ ವಿಶ್ಲೇಷಕ ಲೇಖನಗಳು ಎರಡು ರಂಗಗಳ ನಡುವಿನ ಅತ್ಯಂತ ಸಮಸಮ ಹೋರಾಟದ ಕುರಿತು ಬೊಟ್ಟುಮಾಡಿ, ಕೇರಳದ ರಾಜಕೀಯ ಚರಿತ್ರೆಯಲ್ಲಿ ಸಮಾನಾಂತರವಿಲ್ಲದಷ್ಟು ಪ್ರಭಲ ಮಾರ್ಕ್ಸ್‌ವಾದೀ ಪಕ್ಷದ ನೇತೃತ್ವದಲ್ಲಿ ವಿರೋಧ ಪಕ್ಷದ ಉದಯವಾಗಿದೆ ಎಂದು ಸಾರಿದವು.

ಲಕ್ಷಕ್ಕಿಂತ ಕಡಿಮೆ ಬಹುಮತ

ವಿವರವಾದ ಅಂಕೆಸಂಖ್ಯೆಗಳು ಬಂದ ಹಾಗೆ ವಿವಿಧ ಏಜೆನ್ಸಿಗಳು—ಪಿ.ಟಿ ಐ. ಮತ್ತು ಯು. ಎನ್. ಐ. ಸೇರಿ—ಈ ಅಂಕೆಸಂಖ್ಯೆಗಳನ್ನು ವಿಶ್ಲೇಷಿವೆ...... ಯು.ಎನ್.ಐ. ಕೇರಳದ ಮೇ 23ರ ಪತ್ರಿಕೆಗಳಲ್ಲಿ ಹೀಗೆ ಬರೆದಿದೆ:

"ಕೇರಳದ ವಿಧಾನ ಸಭೆಗೆ ನಡೆದ ಮೇ 19ರ ಚುನಾವಣೆಯಲ್ಲಿ ಎಲ್.ಡಿ. ಎಫ್. ಮತ್ತು ಯು. ಡಿ. ಎಫ್. ಗಳ ನಡುವೆ 9.5 ಮಿಲಿಯ ಒಟ್ಟು ಸಿಂಧು ಮತಗಳಲ್ಲಿ ಕೇವಲ ಒಂದು ಲಕ್ಷಕ್ಕಿಂತ ಕಡಿಮೆ ಅಂತರವಿತ್ತಷ್ಟೆ."

"ಒಟ್ಟು 9,526,895 ಸಿಂಧು ಮತಗಳಲ್ಲಿ ಕಾಂಗ್ರೆಸ್ (ಐ) ನೇತೃತ್ವದ ಯು ಡಿ.ಎಫ್.ಗೆ 4,616,918 (48.27 ಸೇಕಡ) ಮತಗಳೂ 77 ಸೀಟುಗಳು, ಎಲ್. ಡಿ. ಎಫ್. ಗೆ 4,521,812 (47.28 ಸೇಕಡ) ಮತಗಳೂ, 63 ಸೀಟುಗಳೂ ದೊರಿತವು."

"ಜನಪ್ರಿಯತೆಯ ದೃಷ್ಟಿಯಲ್ಲಿ ವ್ಯತ್ಯಾಸವು 95,227 ಅಥವಾ ಸಿಂಧು ಮತಗಳಲ್ಲಿ 0.99 ಸೇಕಡ ಮಾತ್ರ."

ಪಿ.ಟಿ.ಐ., ಯು.ಎನ್.ಐ. ಮತ್ತಿತರ ಏಜೆನ್ಸಿಗಳ ಗುಣಾಕಾರಗಳಲ್ಲಿ ಕೇವಲ ಅತ್ಯಲ್ಪ ವ್ಯತ್ಯಾಸ. ಸರಕಾರಿ ಅಂಕೆಸಂಖ್ಯೆಗಳು ಬಂದಾಗ ಅವುಗಳಲ್ಲಿ ಇನ್ನು ಅಲ್ಪಸ್ವಲ್ಪ ವ್ಯತ್ಯಾಸಗಳಾಗಬಹುದು; ಅವುಗಳೆಲ್ಲವೂ ಪತ್ರಿಕೆಗಳಲ್ಲಿ ಬಂದ ಅಂಕೆಸಂಖ್ಯೆಗಳ ಆಧಾರದಲ್ಲಿ ನಿರೂಪಿಸಲ್ಪಟ್ಟವೆ.

ಗುಣಾಕಾರಗಳು ತಪ್ಪಿಹೋಗಿವೆ

ರಾಜಕೀಯಗಳ ವಿಶ್ಲೇಷಕರು, ವಿಶೇಷವಾಗಿ ಯು. ಡಿ. ಎಫ್. ಪರವಾಗಿರುವ 'ಮಲಯಾಳಂ ಮನೋರಮಾ' ಪತ್ರಿಕೆಗಳು, ಎರಡೂ ರಂಗಗಳ ನಡುವೆ ಸಮ ಸಮ ಹೋರಾಟದ ಬಗ್ಗೆ; ಎಲ್.ಡಿ.ಎಫ್.ನ ಗಣನೀಯ ಸಾಧನೆಯ ಬಗ್ಗೆ ಗಮನ ಹರಿಸಲೇಬೇಕಾಗಿ ಬಂತು. ಕೊನೆಗೆ ಬಂದ ಫಲಿತಾಂಶಗಳು ಯು.ಡಿ.ಎಫ್. ಮುಂದಾಳುಗಳು ಮತ್ತು ಅದರ ಬೆಂಬಲಿಗರು ಆರಂಭದಲ್ಲಿ ಮಾಡಿದ ಗುಣಾಕಾರಗಳಿಗಿಂತ ತೀರಾ ಭಿನ್ನವಾಗಿದ್ದವು.

ಯು. ಡಿ. ಎಫ್. ಪರ ಪತ್ರಿಕೆಗಳ ಲೇಖಕರೂ, ಯು.ಡಿ.ಎಫ್.ನ ವಕ್ತಾರರೂ ಯು.ಡಿ.ಎಫ್. ಎಂದು ಕರೆಯಲ್ಪಟ್ಟ 12 ರಾಜಕೀಯ, ಜಾತಿ ಮತ್ತು ಮತೀಯ ಸಂಘಟನೆಗಳ ಮತ್ತು ಪಕ್ಷಗಳ ಕೂಡುವಿಕೆಯನ್ನು 1960ರ ಕಮ್ಯೂನಿಸ್ಟ್ ವಿರೋಧಿ ರಂಗ ಮತ್ತು 1977ರ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ವಿರೋಧಿರಂಗಗಳಿಗೆ ತುಲನೆ ಮಾಡುವುದೊಂದು 'ಫಾಶ್ಯನ್' ಆಗಿತ್ತು.

1981ರ ಅಕ್ಟೋಬರಿನಲ್ಲಿ ಎಲ್. ಡಿ.ಎಫ್.ನಿಂದ ಅಂಟೋನಿ ಕಾಂಗ್ರೆಸ್ ಮತ್ತು ಕೇರಳ ಕಾಂಗ್ರೆಸ್ (ಮಾಣಿ) ಹೊರನಡೆದುದು; ಆರ್.ಎಸ್.ಪಿ.ಯ (ಶ್ರೀಕಂಠನ್ ಮತ್ತು ಪರಮೇಶ್ವರನ್) ಗುಂಪುಗಳು ಮತ್ತು ಅಖಿಲ ಭಾರತ ಕಮ್ಯುನಿಸ್ಟ್ ಪಕ್ಷದ ಸೇರ್ಪಡೆ; ನಾಯರ್ ಎನ್ ಡಿ.ಪಿ. ಈಳವ ಎಸ್. ಆರ್.ಪಿ., ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ಕೇರಳ ಕಾಂಗ್ರೆಸ್ (ಜೋಸೆಫ್) ಗುಂಪುಗಳ ಮುಂದುವರಿಯುವಿಕೆ - ಇವುಗಳಿಂದಾಗಿ ಎಲ್ಲಾ ಕಮ್ಯುನಿಸ್ಟ್ ವಿರೋಧಿ ರಾಜಕೀಯ ಪಕ್ಷಗಳೂ, ಗುಂಪುಗಳೂ ಕಾಂಗ್ರೆಸ್ (ಐ) ಹಿಂದೆ ಅಣಿ ನೆರೆಯುವವು ಎಂದು ಆಶಿಸಲಾಯಿತು. ಹಾಗೆಯೇ ರಾಜ್ಯದ ಎಲ್ಲಾ ಜಾತಿಗಳೂ ಮತಗಳೂ ದೊಡ್ಡ ಪ್ರಮಾಣದಲ್ಲಿ ಕಾಂಗ್ರೆಸ್ (ಐ) ಹಿಂದೆ ನಿಲ್ಲುವುವು ಎಂದು ಪರಿಗಣಿಸಲಾಯಿತು. ಈ ರಾಜಕೀಯ ಕೂಡುವಿಕೆಗೆ 4 ದಿನವಿಡೀ ರಾಜ್ಯದಲ್ಲಿ ಚುನಾವಣೆ ಪ್ರಚಾರಗೈದ ಶ್ರೀಮತಿ ಇಂದಿರಾ ಗಾಂಧಿಯ 'ಆಕರ್ಷಣೀಯ ವ್ಯಕ್ತಿತ್ವ' ಪ್ರಭಾವ ಬೀರುವುದೆಂದು ಪರಿಗಣಿಸಲಾಗಿತ್ತು. 80 ದಿನ ಕರುಣಾಕರನ್ ಮಂತ್ರಿ ಮಂಡಳಿವನ್ನು ಸಭಾಪತಿಯ ಕುಪ್ರಸಿದ್ಧ ನಿರ್ಣಾಯಕ ಮತದ ಆಧಾರದಲ್ಲಿ ನಿಲ್ಲಲು ಬಿಟ್ಟ ಗವರ್ನರರ ಸರಕಾರಿ ಆಡಳಿತೆಯ ಸಹಾಯವೂ ಇತ್ತು. ಈ ಎಲ್ಲಾ ಕಾರಣಗಳಿಂದಾಗಿ ಯು. ಡಿ. ಎಫ್. ಗೆ ಚುನಾವಣೆ ಗೆಲ್ಲುವುದು ಒಂದು 'ವಾಕಿಂಗ್' ಮಾಡಿದಂತೆ ಎಂದು ಪರಿಗಣಿಸಲಾಗಿತ್ತು.

ಮತಗಳ ಸಂಖ್ಯೆಗಳು

ಇದೆಲ್ಲವೂ ವಾಸ್ತವಿಕ ಪರಿಸ್ಥಿತಿಗಿಂತ ತೀರಾ ಭಿನ್ನವಾಗಿತ್ತು ಎಂಬುದು ಅಂಕೆ ಸಂಖ್ಯೆಗಳಿಂದ ವಿಧಿತವಾಗುವುದು. 1977ರಲ್ಲಿ ಸಿ.ಪಿ.ಐ.(ಎಂ) ನೇತೃತ್ವದ ರಂಗಕ್ಕೆ 38 ಲಕ್ಷ ಮತಗಳು (41.9 ಶೇಕಡ) ಸಿಕ್ಕಿದ್ದು 1980 ರಲ್ಲಿ 48 ಲಕ್ಷ ಮತಗಳಿಗೆ (50 ಶೇಕಡ) ಏರಿತು. ಸಿ.ಪಿ.ಐ (ಎಂ) ನೇತೃತ್ವದ ರಂಗಕ್ಕೆ ಈ ಶಕ್ತಿ ಅಂಟೋನಿ ಕಾಂಗ್ರೆಸ್ ಮತ್ತು ಕೇರಳ ಕಾಂಗ್ರೆಸ್ (ಮಾಣಿ) ಗಳಿಂದ ಬಂದುದು ಎಂದು ಎಣಿಸಲಾಗಿತ್ತು. ಈ ಎಣಿಕೆ ಎಷ್ಟು ಅವಾಸ್ತವ ಎಂಬುದು 1982ರಲ್ಲಿ ಸಿಕ್ಕಿದ 45 ಲಕ್ಷ ಮತಗಳು (46.9 ಶೇಕಡಾ) ಸ್ಪಷ್ಟಪಡಿಸುತ್ತವೆ.

ಇನ್ನೊಂದು ರಂಗಕ್ಕೆ 1977ರಲ್ಲಿ 46 ಲಕ್ಷ ಮತಗಳು(51.2 ಶೇಕಡಾ); 1980ರಲ್ಲಿ 45 ಲಕ್ಷ ಮತಗಳು (46.3 ಶೇಕಡಾ) ಮತ್ತು 1982ರಲ್ಲಿ 46 ಲಕ್ಷ ಮತಗಳಿಗಿಂತ ಅಲ್ಪ-ಸ್ವಲ್ಪ ಅಧಿಕ (48.1 ಶೇಕಡಾ). ಮತಗಳು ದೊರೆತವು.

ಆದ್ದರಿಂದ ಈ ಎರಡು ರಂಗಗಳ ಏರಿಳಿತಗಳು ಕೇವಲ ಅಲ್ಪ; ಆದಕಾರಣ ಅಂಟೋನಿ ಕಾಂಗ್ರೆಸ್ ಮತ್ತು ಕೇರಳ ಕಾಂಗ್ರೆಸ್ (ಮಾಣಿ)ಗಳ ಕೂಡುಗೆ ಕೇವಲ ಕನಿಷ್ಠ.

ಇನ್ನು ಜಾತಿ ಮತ್ತು ಮತೀಯ ಕೂಡುವಿಕೆಯ ಬಗ್ಗೆ ಹೇಳುವುದಾದರೆ, 1980ರಲ್ಲಿ ಕಾಂಗ್ರೆಸ್ (ಐ) ನೇತೃತ್ವದ ರಂಗದಲ್ಲಿ ಆಗಿನ ಜನತಾದ ಜನಸಂಘದ ಭಾಗವೂ ಸೇರಿದ್ದರೂ, ಆ ರಂಗವು 1980ರಲ್ಲಿ ಸೋತಿತ್ತು. ಆದಕಾರಣ, ಅವುಗಳು ಹೇಳಿಕೊಳ್ಳುವಷ್ಟು ಬಲಶಾಲಿಯಾಗಿಲ್ಲ ಎಂಬುದನ್ನು ದೃಢಪಡಿಸಿತು.

ಮತೀಯ, ಜಾತೀಯ ಅಂಶ

ಆದರೆ ಇದರರ್ಥ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ಕೇಳರ ಕಾಂಗ್ರೆಸ್‌ನಂತಹ ರಾಜಕೀಯ ಪಕ್ಷಗಳಿಗೆ, ನಾಯರ್, ಈಳವ, ಇತ್ಯಾದಿ ಜಾತೀಯ ಸಂಘಟನೆಗಳಿಗೆ ಮತದಾರರ ಮೇಲೆ ಏನೂ ಪ್ರಭಾವವಿಲ್ಲವೆಂದಲ್ಲ.

ಕಮ್ಯುನಿಸ್ಟರು, ಸಮಾಜವಾದಿಗಳು ಮತ್ತಿತರ ಎಡ ಶಕ್ತಿಗಳು ಒಂದು ದೃಢವಾದ ರಾಜಕೀಯ ಸಂಯುಕ್ತರಂಗವನ್ನು ಇತರ ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಜಾತ್ಯೇತರ ಶಕ್ತಿಗಳ ಜತೆ ಮಾಡಿದರೆ, ಪ್ರಬಲವಾಗಿ ತೋರುವ ಕಾಂಗ್ರೆಸ್ (ಐ) ಮತ್ತಿತರ ಪ್ರತಿಗಾಮಿ ರಾಜಕೀಯ ಪಕ್ಷಗಳು ಮತ್ತು ಎಲ್ಲಾ ಜಾತಿ ಮತ್ತು ಮತೀಯ ಸಂಘಟನೆಗಳ ಒಕ್ಕೂಟವನ್ನು ಪರಿಣಾಮಕಾರಿಯಾಗಿ ಹೋರಾಡಿ ಸೋಲಿಸಬಹುದೆಂಬುದನ್ನು ಈ ಅಂಕೆಸಂಖ್ಯೆಗಳ ವಿಶ್ಲೇಷಣೆಯು ತೋರಿಸಿಕೊಡುತ್ತದೆ.

ಇದೇ ರೀತಿಯ ಕೂಡುವಿಕೆಗಳು 1980ರಲ್ಲಿ ಇತ್ತು. 1980ರ ಚುನಾವಣಾ ಫಲಿತಾಂಶಗಳು ಇದನ್ನೇ ಸೂಚಿಸಿದ್ದವು. ಈ ಚುನಾವಣೆಯಲ್ಲೂ ಯು.ಡಿ.ಎಫ್.ನ ವಿಜಯವು ವಿಶೇಷವಾಗಿ ಮುಸ್ಲಿಂ ಬಹುಮತದ ಮಲಪುರಂ ಜಿಲ್ಲೆಯಲ್ಲೂ, ಕ್ರಿಶ್ಚಿಯನ್ ಬಹುಮತದ ಕೊಟ್ಟಾಯಂ ಮತ್ತು ಇಡುಕ್ಕಿ ಜಿಲ್ಲೆಗಳಲ್ಲೂ ತಿರುವಾಂಕೂರು ಕ್ರಿಶ್ಚಿಯನ್ ಹಾಗೂ ಮಲಬಾರ ಮುಸ್ಲಿಂ ಒಟ್ಟಾಗಿ ಅಧಿಕವಿರುವ ವೈನಾಡಿನಲ್ಲೂ, ಅಥವಾ ಎನ್.ಡಿ.ಪಿ. ಮತ್ತು ಎಸ್. ಆರ್. ಪಿ. ಗಳ ಪ್ರಭಾವ ಹೆಚ್ಚಿರುವ ಎರ್ನಾಕುಲಂ, ಆಲೆಪ್ಪಿ ಮತ್ತು ಕ್ವಿಲೋನ್ ಜಿಲ್ಲೆಗಳಲ್ಲಿ ಮಾತ್ರ.

ಇತರ ಎಲ್ಲಾ ಜಿಲ್ಲೆಗಳಲ್ಲಿ ಎಲ್. ಡಿ ಎಫ್. ವಿಜಯಶಾಲಿಯಾಗಿದೆ (ಕಣ್ಣಾನೂರು, ಕೋಜಿಕೋಡ್, ಪಾಲ್‌ಘಾಟ್ ಮತ್ತು ತ್ರಿವೇಂಡ್ರಂ). ಅಥವಾ ಸಮ ಬಲಶಾಲಿಯಾಗಿದೆ (ಯು. ಡಿ. ಎಫ್. ನೊಡನೆ ತ್ರಿಚೂರಿನಲ್ಲಿ.)

ಕಾಂಗ್ರೆಸ್ (ಐ)ಯ ಅವಲಂಬನೆ

ಈ ಚುನಾವಣೆಯಲ್ಲಿ ವಿವಿಧ ಪಕ್ಷಗಳ ಅಭ್ಯರ್ಥಿಗಳು ಪಡೆದ ಮತಗಳ ಪ್ರಮಾಣವನ್ನು ಪರಿಶೀಲಿಸಿದರೆ, 10 ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗಳು ಪ್ರತಿಯೊಬ್ಬರೂ 10,000 ಮತಗಳಿಗಿಂತ ಅಧಿಕ ಮತಗಳನ್ನು ಪಡೆದು ಗೆದ್ದಿದ್ದಾರೆ ಎಂದು ತಿಳಿಯುವುದು. ಅದೇ ರೀತಿಯಲ್ಲಿ 10,000ಕ್ಕಿಂತಲೂ ಜಾಸ್ತಿ ಮತಗಳಿಂದ ಗೆದ್ದ ಇತರ ಪಕ್ಷಗಳ ಅಭ್ಯರ್ಥಿಗಳು—ಸಿ ಪಿ. ಐ. (1), ಅಖಿಲ ಭಾರತ ಮುಸ್ಲಿಂ ಲೀಗ್ (1), ಅಂಟೋನಿ ಕಾಂಗ್ರೆಸ್(1), ಇಂಡಿಯನ್ ಮುಸ್ಲಿಂ ಲೀಗ್ (7), ಜನತಾ (1), ಕೇರಳ ಕಾಂಗ್ರೆಸ್ (ಜೋಸೆಫ್) (2), ಕೇರಳ ಕಾಂಗ್ರೆಸ್ (ಎಸ್) (2), ಮತ್ತು ಬಂಡುಖೋರ ಜನತಾ (1).

ಯು. ಡಿ. ಎಫ್. ರಂಗದಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮಾತ್ರ ಅದರ ಪ್ರಬಲಕೋಟೆಯಾದ ಮಲಪುರಂ ಜಿಲ್ಲೆಯಲ್ಲಿ ಮಾರ್ಕ್ಸಿಸ್ಟ್ ಪಾರ್ಟಿಯ ಸಂಗಾತಿಗಳಂತೆ 10,000 ಮತಗಳಿಗಿಂತ ಅಧಿಕ ಮತಗಳನ್ನು ಪಡೆದಿದೆ.

ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಮತ್ತು ಕೇರಳ ಕಾಂಗ್ರೆಸ್‌ಗಳು ಅವರ ಸಖ್ಯತೆಯಲ್ಲಿ ಇಲ್ಲದಿರುತ್ತಿದ್ದರೆ, ಕಾಂಗ್ರೆಸ್ (ಐ)ನ ಸ್ಥಾನವು 15 ವರ್ಷಗಳ ಹಿಂದೆ ಹೇಗಿತ್ತೊ ಹಾಗೆಯೇ ಇರುತ್ತಿತ್ತು. 1967ರಲ್ಲಿ ಕರುಣಾಕರನ್‌ರ ವಿಭಾಜ್ಯ ಕಾಂಗ್ರೆಸ್ ಪಕ್ಷವು ವಿಧಾನ ಸಭೆಗೆ ಕೇವಲ 9 ಮಂದಿಯೊಂದಿಗೆ ಪ್ರವೇಶಿಸಿತ್ತು. ಆಗ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಎಡ ಪಕ್ಷದೊಂದಿಗೆ ಇತ್ತು; ಕೇರಳ ಕಾಂಗ್ರೆಸ್ ಎಡ ಪಕ್ಷಗಳ ವಿರುದ್ಧ ಮತ್ತು ಅಧಿಕೃತ ಕಾಂಗ್ರೆಸ್ ವಿರುದ್ಧ ಹೋರಾಡುತ್ತಿತ್ತು.

ಆ ಕಾಲದಿಂದ ಈವರೆಗೆ ಕಾಂಗ್ರೆಸ್ಸಿನಲ್ಲಿ ಸಂಭವಿಸಿದ ವಿಭಜನೆಗಳು, ಪುನರ್ ಮಿಲನಗಳು ಮತ್ತು ಪುನರ್-ವಿಭಜನೆಗಳು ಪಕ್ಷವನ್ನು ಇಂಡಿಯನ್ ಯುನಿಯನ್ ಮುಸ್ಲಿಂ ಲೀಗ್ ಮತ್ತು ಕೇರಳ ಕಾಂಗ್ರೆಸ್ಸಿನ ಶಿಬಿರದ ಬೆಂಬಲಿಗ ಪಕ್ಷವಾಗಿಯೂ, ಅದರೊಡನೆ ಜತೆ ಸೇರಲು ತಯಾರಿರುವ ಎಲ್ಲಾ ಜಾತೀಯ ಸಂಘಟನೆಗಳ ಶಿಬಿರದ ಬೆಂಬಲಿಗ ಪಕ್ಷವಾಗಿಯೂ ಪರಿವರ್ತಿಸಿದೆ.

ಗಣನೀಯ ರಾಜಕೀಯ ಜಯಗಳು

ಈ ಪ್ರತಿಗಾಮೀ ರಾಜಕೀಯ ಪಕ್ಷಗಳು ಮತ್ತು ಜಾತೀಯ-ಮತೀಯ ಸಂಘಟನೆಗಳ ಕೂಡುವಿಕೆಯ ವಿರುದ್ಧ ಎಲ್.ಡಿ.ಎಫ್. ಚುನಾವಣಾ ಹೋರಾಟದಲ್ಲಿ ಉತ್ತಮ ಫಲಿತಾಂಶವನ್ನು ಪಡೆದಿರುವುದನ್ನು ಮಾತ್ರವಲ್ಲ, ಗಣನೀಯ ರಾಜಕೀಯ ಜಯಗಳನ್ನು ಪಡೆದಿರುವುದನ್ನು ನಾವು ಕಾಣಬಹುದು. ಚುನಾವಣೆಯ ಮೊದಲು ಮತ್ತು ಚುನಾವಣೆಯ ಕಾಲದಲ್ಲಿ ನಡೆಸಲ್ಪಟ್ಟ ಪ್ರಬಲ ಸಾಮೂಹಿಕ ರಾಜಕೀಯ ಚಳವಳಿಯು ರಾಜ್ಯದಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಪಕ್ಷಗಳ ರಾಜಕೀಯ ಕೆಲಸದ ಭವಿಷ್ಯತ್ತಿನ ಮೇಲೆ ಶಾಶ್ವತ ಪರಿಣಾಮ ಬೀರಿವೆ. ಇವುಗಳಲ್ಲಿ ಕೆಲವು ಈ ಕೆಳಗಿನಂತಿವೆ:

(6ನೇ ಪುಟ ನೋಡಿ)

ಎಡ ಚಳುವಳಿಯಲ್ಲಿ ಜಾಗರಣ ಕಾರ್ಯದ ಮಹತ್ವ

—ಸುಧೀಂದ್ರ ಕುಲಕರ್ಣಿ

ಯಾವುದೇ ಸಮಾಜದ ಸಾಮಾಜಿಕ-ಆರ್ಥಿಕ ರಚನೆಯು ಮೂಲಭೂತ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಾಗ ಆ ಬಿಕ್ಕಟ್ಟು ಒಂದು ಸರ್ವಾಂಗೀಣ ಬಿಕ್ಕಟ್ಟಾಗಿಯೇ ಬೆಳೆದು ಬರುತ್ತದೆ. ಇದು ಐತಿಹಾಸಿಕ ಸತ್ಯವು. ಸಾಮಾಜಿಕ, ಆರ್ಥಿಕ ರಚನೆಯೊಂದಿಗೇ ಆ ಸಮಾಜದ ರಾಜಕೀಯ, ಸಾಂಸ್ಕೃತಿಕ, ನೈತಿಕ ಆಧಾರಗಳೂ ಆ ಸರ್ವಾಂಗೀಣ ಬಿಕ್ಕಟ್ಟಿನ ಪೆಟ್ಟು ತಿನ್ನುತ್ತ ಶಿಥಿಲಗೊಳ್ಳತೊಡಗುತ್ತವೆ, ಕುಸಿಯತೊಡಗುತ್ತವೆ. ನಮ್ಮ ದೇಶ ಇಂದು ಒಂದು ಅಸಾಧಾರಣ ಬಿಕ್ಕಟ್ಟಿನ ಮೂಲಕ ಸಾಗಿದೆ ಎಂಬುದನ್ನು ಅದರ ಸರ್ವ ರೋಗಲಕ್ಷಣಗಳೂ ಸಾರಿ ಹೇಳುತ್ತವೆ. ಬೂರ್ಜ್ವಾ - ಭೂಮಾಲಿಕ ವರ್ಗಗಳ 35 ವರ್ಷಗಳ ಆಳ್ವಿಕೆಯು ಜನತೆಯ ಭೌತಿಕ ಜೀವನದ ಸಮಸ್ಯೆಗಳನ್ನು ಉಲ್ಬಣಗೊಳಿಸಿದೆ ಅಷ್ಟೇ ಅಲ್ಲ, ಅದು ಜೀವನಮೌಲ್ಯಗಳ, ಸಾಂಸ್ಕೃತಿಕ ಹಾಗೂ ವೈಚಾರಿಕ ಪರಿಸರದ ಅಧೋಗತಿಗೆ ಕೂಡ ಕಾರಣೀಭೂತವಾಗಿದೆ. ದಲಿತ ಜನಸಮುದಾಯದ ವಿವಿಧ ವಿಭಾಗಗಳನ್ನು ಅವುಗಳ ವಿಭಾಗೀಯ, ಹಾಗೂ ಸಾಮೂಹಿಕ ಸಮಸ್ಯೆಗಳ ಸುತ್ತ ಸಂಘಟಿಸಿ ಎಡಶಕ್ತಿಗಳ ನೇತೃತ್ವದಲ್ಲಿ ವ್ಯಾಪಕ ರಾಜಕೀಯ ಆಂದೋಲನವನ್ನು ಬೆಳೆಯಿಸುವ ಕಾರ್ಯವಂತೂ ನಡೆಯುತ್ತಲೇ ಇದೆ. ಆದರೆ ಪತನಶೀಲವಾದ ಇಂದಿನ ಸಾಂಸ್ಕೃತಿಕ, ವೈಚಾರಿಕ ಜೀವನದಲ್ಲಿ ಪ್ರತಿಗಾಮಿ ಶಕ್ತಿಗಳು ಸವಾಲನ್ನು ಎಸೆದಿವೆ. ಈ ಸವಾಲನ್ನು ಸ್ವೀಕರಿಸಿ ಸರ್ವಾಂಗೀಣ ಸ್ವರೂಪದ ಅಂದರೆ ಜೀವನದ ಎಲ್ಲ ಮಗ್ಗಲುಗಳನ್ನೂ ಮುಟ್ಟುವ, ಕ್ರಾಂತಿಕಾರಿ ವಿಚಾರಸರಣಿಯನ್ನು ಬೆಳೆಯಿಸುವದು ಹಾಗೂ ಜನಸಮುದಾಯದಲ್ಲಿ ಪಸರಿಸುವದೂ ಕೂಡ ಇಂದು ಎಡಶಕ್ತಿಗಳ ಆದ್ಯ ಕರ್ತವ್ಯವಾಗಿ ನಿಂತಿದೆ. ಕ್ರಾಂತಿ ಕೇವಲ ರಾಜಕೀಯ ಸತ್ತೆಯನ್ನು ಗೆದ್ದುಕೊಳ್ಳುವುದಕ್ಕಾಗಿ, ಸಮಾಜದ ಆರ್ಥಿಕ ರಚನೆಯನ್ನು ಆಮೂಲಾಗ್ರವಾಗಿ ಪರಿವರ್ತಿಸುವುದಕ್ಕಾಗಿ ಮಾತ್ರ ಅಲ್ಲ. ಆ ಮೂಲಕ ಮನುಷ್ಯನಿಗೆ ತಕ್ಕುದಾದ ಹೊಸ ಸಮಾಜ, ಹೊಸ ವ್ಯಕ್ತಿಯನ್ನು ನಿರ್ಮಿಸುವದು ಕ್ರಾಂತಿಯ ಅಂತಿಮ ಧ್ಯೇಯ ಎಂದು ತಿಳಿದಾಗ ಈ ಸರ್ವಾಂಗೀಣ ವೈಚಾರಿಕ-ಸಾಂಸ್ಕೃತಿಕ ಕಾರ್ಯದ ಮಹತ್ವ ಮನವರಿಕೆಯಾಗುತ್ತದೆ.

ಆಳುವ ವರ್ಗಗಳು ಕೇವಲ ಆರ್ಥಿಕ-ಸಾಮಾಜಿಕ ಕ್ಷೇತ್ರಗಳಲ್ಲಷ್ಟೇ ಅಲ್ಲ, ಸಾಂಸ್ಕೃತಿಕ-ವೈಚಾರಿಕ ಕ್ಷೇತ್ರಗಳಲ್ಲೂ 'ಆಳುವ ವರ್ಗ'ಗಳಾಗಿರುತ್ತವೆಂದು— ಮಾರ್ಕ್ಸ್ ಹೇಳುತ್ತಾನೆ. ಇತಿಹಾಸದಲ್ಲಿ ದೀರ್ಘ ಕಾಲಾವಧಿಯವರೆಗೆ ವರ್ಗೀಯ ಶೋಷಣೆಗೆ ತುತ್ತಾದವರು, ಸಮಾಜದ ಭೌತಿಕ-ಸಾಂಸ್ಕೃತಿಕ ಪ್ರಗತಿಯಿಂದ ವಂಚಿತರಾದವರು, ತಮ್ಮ ಸ್ವತಂತ್ರ ಬೆಳವಣಿಗೆಗೆ ಅವಕಾಶವನ್ನೇ ಪಡೆಯದವರು— ಈ ಬಹುಸಂಖ್ಯ ಸಾಮಾನ್ಯ ಜನರು ಮೇಲ್ವರ್ಗಗಳ ಆಚಾರ – ವಿಚಾರಗಳಿಂದಲೇ ಪ್ರಭಾವಿತರಾಗಿದ್ದರೆ, ಅವುಗಳನ್ನು ಸ್ವೀಕರಿಸಿದ್ದರೆ ಅದರಲ್ಲಿ ಆಶ್ಚರ್ಯವಿಲ್ಲ. ಶೋಷಿತ ಜನತೆಯು ಮೇಲ್ವರ್ಗಗಳ ವೈಚಾರಿಕ-ಸಾಂಸ್ಕೃತಿಕ ಆಧಾರಗಳಿಂದ ಪ್ರಭಾವಿತಗೊಂಡಿರುವ, ಅವುಗಳನ್ನು ಸ್ವೀಕರಿಸಿರುವ ವಾಸ್ತವತೆಯೂ ಸಮಾಜದಲ್ಲಿ ಮೇಲ್ವರ್ಗಗಳ ವರ್ಚಸ್ಸನ್ನು ಖಾಯಮ್ಮಾಗಿಡುವದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇಟಾಲಿಯನ್ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕ ಮುಖಂಡರಲ್ಲೊಬ್ಬನಾದ ಹಾಗೂ ಮುಸೋಲೋನಿಯ ಫ್ಯಾಸಿಸಂ ವಿರುದ್ಧ ಹೋರಾಟದಲ್ಲಿ ದೀರ್ಘಕಾಲದವರೆಗೆ ಸೆರೆಮನೆವಾಸ ಸಹಿಸಿ ಮರಣವನ್ನಪ್ಪಿದ ಅಂತೋನಿಯೋ ಗ್ರಾಮ್‌ಶಿ [1891-1937] ಹೇಳುವಂತೆ, ಆಳುವ ವರ್ಗಗಳು ಒಟ್ಟು ಸಮಾಜದ ಮೇಲಿನ ತಮ್ಮ ಪ್ರಭುತ್ವವನ್ನು ಕೇವಲ ತಮ್ಮ ರಾಜ್ಯಸತ್ತೆಯ [State] ದಮನಯಂತ್ರ ಬಳಸಿಯೇ ಕಾಪಾಡಿಕೊಳ್ಳುವದಿಲ್ಲ. ಜನಸಾಮಾನ್ಯರ ಮೇಲೆ ತಮ್ಮ ವೈಚಾರಿಕ-ಸಾಂಸ್ಕೃತಿಕ ಪ್ರಭಾವವನ್ನು ಸ್ಥಾಪಿಸಿ ತನ್ಮೂಲಕ ತಮ್ಮ ಆಳ್ವಿಕೆಯನ್ನು ಜನತೆಯ ಮಧ್ಯದಲ್ಲಿ ನ್ಯಾಯಸಮ್ಮತವಾಗಿಸಿಕೊಂಡು ಆಳುವ ವರ್ಗಗಳು ತಮ್ಮ ಆಳ್ವಿಕೆಗೆ ಭದ್ರತೆ ಪಡೆಯುತ್ತವೆ. ಕೇವಲ ದಮನಶಕ್ತಿಯ ಆಧಾರದ ಮೇಲೆ ಬಂಡವಾಳಶಾಹಿ ಇಷ್ಟು ದೀರ್ಘಕಾಲದವರೆಗೆ ಉಳಿದು ನಿಂತಿಲ್ಲ. ಹಾಗೆ ನಿಲ್ಲಲು ಯಾವುದೇ ವರ್ಗ ಸಮಾಜಕ್ಕೂ ಶಕ್ಯವಿಲ್ಲ. ಬಲಪ್ರಯೋಗದೊಂದಿಗೇ ಜನತೆಯ ಮಧ್ಯದಲ್ಲಿ ನ್ಯಾಯಸಮ್ಮತ ಸ್ಥಾನ ಗಳಿಸುವುದೂ ಕೂಡ ಆಳುವ ವರ್ಗಗಳ ರಾಜ್ಯಸತ್ತೆಯ ಪ್ರಮುಖ ಲಕ್ಷಣ. ಹೀಗಿದ್ದರೂ ಜನತೆಯ ಮಧ್ಯದಲ್ಲಿ ಈ ಸಮ್ಮತಿಯು ಸದಾ ಕಾಲವೂ, ಸಂಪೂರ್ಣವೂ, ನಿರ್ವಿವಾದವಾಗಿಯೂ ಇರುತ್ತದೆ ಎಂದೇನೂ ಅಲ್ಲ. ಅಂತೆಯೇ ಕ್ರಾಂತಿಯನ್ನು ನೆರವೇರಿಸಿ ರಾಜ್ಯಸತ್ತೆಯನ್ನು ಕೈವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಜನಸಮುದಾಯದ ಮನದಲ್ಲಿರುವ ಈ ಆಳ್ವಿಕೆಯ ವೈಚಾರಿಕ-ನೈತಿಕ ಆಧಾರಗಳನ್ನು ತೊಡೆಯಬೇಕಾಗುತ್ತದೆ. "ತುಳಿತಕ್ಕೊಳಗಾದ ಶೋಷಿತ ವರ್ಗವು ನಿಜವಾಗಿಯೂ ಸ್ವಾವಲಂಬಿಯಾಗಿ, ಸ್ವಯಂಚಾಲಿತವಾಗಿ ಸಮಾಜದಲ್ಲಿ ಪ್ರಭುತ್ವಸ್ಥಾನವನ್ನು ವಶಪಡಿಸಿಕೊಳ್ಳಲು ಒಂದು ಹೊಸ ವೈಚಾರಿಕ-ನೈತಿಕ ಪ್ರಣಾಲಿಯನ್ನು ನಿರ್ಮಿಸಬೇಕಾಗುತ್ತದೆ." (ಗ್ರಾಮ್‌ಶಿ) ಶ್ರಮಿಕ ವರ್ಗದ ಈ ಸಂದರ್ಭದಲ್ಲಿಯ ಪ್ರಯತ್ನವನ್ನು ಅಥವಾ ಚಳವಳಿಯನ್ನು ನಾವು ಜಾಗರಣ ಚಳುವಳಿ ಎಂದು ಕರೆಯುತ್ತೇವೆ.

ಜಾಗರಣ ಚಳುವಳಿಯು ಒಟ್ಟು ವರ್ಗ ಸಂಘರ್ಷದ ಒಂದು ಅವಿಭಾಜ್ಯ ಹಾಗೂ ಜೀವಂತ ಅಂಗವೆಂದು ತಿಳಿಯುವದು ಅತ್ಯವಶ್ಯಕ. ಜನಸಮುದಾಯದ ಒಟ್ಟು ಆರ್ಥಿಕ–ರಾಜಕೀಯ ಚಳುವಳಿಯೊಂದಿಗೆ ಜೀವಂತ ಹಾಗೂ ನಿಕಟ ಸಂಬಂಧ ಸ್ಥಾಪಿಸಿಕೊಳ್ಳದೇ, ಅಥವಾ ಅಂಥ ಚಳುವಳಿಗಳ ಮಹತ್ವವನ್ನು ಗೌಣವಾಗಿ ಯೋಚಿಸಿ ಕೈಗೊಂಡ ಯಾವುದೇ ಪುರೋಗಾಮಿ ವೈಚಾರಿಕ - ಸಾಂಸ್ಕೃತಿಕ ಚಟುವಟಿಕೆಯು ತಪ್ಪು ದೃಷ್ಟಿಕೋನದಿಂದ ಬಳಲುತ್ತದೆ ಹಾಗೂ ಅದರ ಪ್ರಭಾವ ಕೂಡ ಮೊಟಕಾಗಿಯೇ ಉಳಿಯುತ್ತದೆ. ವೈಚಾರಿಕ ಚಳವಳಿಯು ಪ್ರತ್ಯಕ್ಷ ಹೋರಾಟಗಳಿಗೆ ಪರ್ಯಾಯವಲ್ಲ. ಈ ಸಂದರ್ಭದಲ್ಲಿ ಮಾರ್ಕ್ಸ್‌ನ ಈ ಮಾತು ಅತ್ಯಂತ ಸೂಕ್ತವಾಗಿದೆ : "ಶಸ್ತ್ರ ಬಳಸಬೇಕಾದ ಕಡೆ ಟೀಕಾಸ್ತ್ರದ ಪ್ರಯೋಗ ನಿಷ್ಪ್ರಯೋಜಕ. ಪ್ರತ್ಯಕ್ಷದಲ್ಲಿಯ ಒಂದು ಭೌತಿಕ ಶಕ್ತಿಯನ್ನು ಬೇರೆಯಾದ ಇನ್ನೊಂದು ನಿಜವಾದ ಭೌತಿಕ ಶಕ್ತಿಯ ಮೂಲಕವೇ ಹೊಡೆದುರುಳಿಸಲು ಸಾಧ್ಯ."

ಜನಸಮೂಹದಲ್ಲಿ ಎಡವಿಚಾರಸರಣಿಯ ಜಾಗರಣ ಇದರರ್ಥ ಸಮುದಾಯ ಒಂದು ಖಾಲಿ ಮಡಕೆ, ಎಡ ವಿಚಾರಸರಣಿಯ ಪ್ರಸಾರಕರು ಅದನ್ನು ತುಂಬಲು ಕೈಗೊಂಡ ಕಾರ್ಯ ಎಂದಲ್ಲ. ದುಡಿಯುವ ಜನತೆಯು ತನ್ನ ದೈನಂದಿನ ಜೀವನದ, ಹೋರಾಟಗಳ ಅನುಭವಗಳನ್ನು ಅರ್ಥೈಸಿಕೊಳ್ಳುವ ಪ್ರಕ್ರಿಯೆ, ಅದು ತನ್ನ ಸ್ವಂತದ ಕಡೆಗೆ ಹಾಗೂ ಒಟ್ಟು ಸಮಾಜದ ಕಡೆಗೆ ನೋಡುವ ದೃಷ್ಟಿ ಇವು ಅತ್ಯಂತ ಕ್ಲಿಷ್ಟವಾಗಿವೆ. ಅಂತರ್‌ವಿರೋಧಾಭಾಸದಿಂದ ಕೂಡಿವೆ. ಈ ಪ್ರಕ್ರಿಯೆಯಲ್ಲಿ ಅದು ತನ್ನ ರೂಢಿ, ಪರಂಪರೆಗಳ ಹಾಗೂ ಪ್ರತಿಷ್ಠಿತ ವರ್ಗಗಳ ವಿಚಾರಸರಣಿಯ ನೆರವು ತೆಗೆದುಕೊಳ್ಳುತ್ತಿರುತ್ತದೆ. ಸಮುದಾಯದ ಗ್ರಹಿಕೆಯಲ್ಲಿರುವುದೆಲ್ಲ ಹಳೆಯದು, ಪ್ರತಿಗಾಮಿ ಅಥವಾ ಎಲ್ಲವೂ ಈ ಕೋಳಿತ ಪ್ರತಿಷ್ಠಿತ ವೈಚಾರಿಕತೆಗೆ ವಿರೋಧಿಯಾದದು ಎಂಬ ಎರಡೂ ಗ್ರಹಿಕೆಗಳೂ ತಪ್ಪು. ಸಮುದಾಯದ ಆಚಾರ ವಿಚಾರಗಳಲ್ಲಿ ಆರೋಗ್ಯಕಾರಿಯಾದುದು ಅನಾರೋಗ್ಯಕಾರದೊಂದಿಗೆ, ಹೊಸದನ್ನು ಕಲಿಯುವ ತಯಾರಿ, ಕಾಲದೊಂದಿಗೆ ಸೆಣಸಿ ಗೆದ್ದ ವಿಷಯಗಳ ದೃಢ ಸ್ವೀಕಾರದೊಂದಿಗೆ ಜೊತೆಯಲ್ಲೇ ನೆಲೆಮಾಡಿಕೊಂಡಿರುತ್ತವೆ. ವೀರ ಹೋರಾಟ ಪ್ರಸಂಗಗಳ ಎಳೆತದಲ್ಲಿ ಅಗಾಧ ತ್ಯಾಗ, ಪರಾಕ್ರಮಗಳನ್ನು ತೋರಿಸುವ ಜನರೇ ಇತರ ಪ್ರಸಂಗಗಳಲ್ಲಿ ಹಿಂದುಳಿದ ವಿಧಿವಿಚಾರಗಳನ್ನು ಬಿಟ್ಟುಕೊಡಲು ಒಪ್ಪದಿರಬಹುದು. ಹೀಗೆ ಅನೇಕ ರೀತಿಯಲ್ಲಿ ಸಮುದಾಯದ, ಅದರಲ್ಲಿಯ ವ್ಯಕ್ತಿಗಳ ಜೀವನವು ಕ್ಲಿಷ್ಟತೆ ಹಾಗೂ ಅಂತರ್ವಿರೋಧಗಳನ್ನು ಪ್ರದರ್ಶಿಸುತ್ತದೆ. ಜಾಗರಣ ಕಾರ್ಯವು ಸಮುದಾಯದ ಜಟಿಲ ಅರಿವಿನ ಪ್ರಪಂಚದಲ್ಲಿಯ ಅಂತರ್ವಿರೋಧಗಳನ್ನು ತೋರಿಸಿಕೊಡುವುದಕ್ಕಾಗಿ ಹಾಗೂ ಸಮುದಾಯವನ್ನು ಕ್ರಾಂತಿಕಾರಿ ವಿಚಾರಸರಣಿಯತ್ತ ಹೊರಳಿಸುವುದಕ್ಕಾಗಿ ಜಾಗರಣ ಕಾರ್ಯವು ಪ್ರಯತ್ನಿಸುತ್ತದೆ. ಆದರೆ ಜೊತೆಯಲ್ಲಿಯೇ ಸಮುದಾಯದ ದೈನಂದಿನ ಜೀವನದಲ್ಲಿಯ, ಅದರ ಪರಂಪರೆಯಲ್ಲಿಯ ಒಳ್ಳೆಯದಾದ, ಸೃಜನಶೀಲವಾದ ಎಲ್ಲವನ್ನೂ ಕಲಿತುಕೊಳ್ಳುವ, ಆತ್ಮಗತ ಮಾಡಿಕೊಳ್ಳುವ ಉತ್ಕಟ ಇಚ್ಛೆಯೂ ಕೂಡ ಜಾಗರಣೆಯ ಕಾರ್ಯದಲ್ಲಿರುತ್ತದೆ. ಅಂತೆಯೇ ಇಂದು ಸಾಮಾನ್ಯವಾಗಿ ನೆಲೆಯೂರಿರುವ ಪುಢಾರಿ-ಪ್ರಜೆ, ಶಿಕ್ಷಕ-ವಿದ್ಯಾರ್ಥಿ ಸಂಬಂಧಗಳೂ ಜಾಗರಣ ಚಳುವಳಿಯಲ್ಲಿಯ ನಿಲುವಿಗೂ ತುಂಬ ಭಿನ್ನವಾಗಿರುತ್ತವೆ. ಜಾಗರಣವು ಪರಸ್ಪರ ಸಂವಾದ ರೂಪದ್ದಾಗಿರಬೇಕು. ಆ ಮೂಲಕ ಸಮುದಾಯ ಹಾಗೂ ಜಾಗರಣದ ಕಾರ್ಯಕರ್ತರ ಮಧ್ಯೆ ಅರಿವಿನ ಒಂದು ಹೊಸ ಮತ್ತು ಉನ್ನತ ಮಟ್ಟದ ಸಂಬಂಧ ಏರ್ಪಡಬೇಕು. ಈ ಕಾರ್ಯದ ಮೂಲಕ ಮನುಷ್ಯನು ಸ್ವಂತ ವಿಚಾರವಂತನಾಗಿ ನಿಲ್ಲುವಂತಾಗಬೇಕು; ತನ್ನ ರೂಢಿ, ಸಂಪ್ರದಾಯಗಳಲ್ಲಿಯ ಹಾಗೂ ಆಳುವ ವರ್ಗಗಳ ವೈಚಾರಿಕತೆಯಲ್ಲಿಯ ಮಿತಿಗಳನ್ನು, ಮಾರಕತೆಯನ್ನು, ದೋಷಗಳನ್ನು ಕಂಡು ಹಿಡಿಯುವಂತಾಗಬೇಕು. ಈ ದೃಷ್ಟಿಯನ್ನಿಟ್ಟುಕೊಂಡೇ ಎಡ ವಿಚಾರಸರಣಿಯ ಜಾಗರಣ ಕಾರ್ಯದ ಆಶಯದೆ ಮಂಡನೆ, ಮಾಧ್ಯಮಗಳ ಬಳಕೆ ಹಾಗೂ ಕಾರ್ಯಪದ್ಧತಿಗಳಿರಬೇಕು.

ಜಾಗರಣ ಕಾರ್ಯವಿಧಾನ

ಇದು ಸಾಧ್ಯವಾಗಬೇಕಾದರೆ ಜಾಗರಣ ಕಾರ್ಯವು ಸರ್ವಾಂಗೀಣ ಸ್ವರೂಪದ್ದಾಗಿರಬೇಕಾಗಿರುವುದು ಅಗತ್ಯ. ಈ ದಿನ ಆಳುವ ವರ್ಗಗಳು ಧರ್ಮ, ರಾಷ್ಟ್ರ, ರಾಜಕಾರಣ, ಆರ್ಥಿಕ ವ್ಯವಹಾರ, ನ್ಯಾಯಪದ್ಧತಿ, ಕುಟುಂಬ, ಲೈಂಗಿಕ ಸಂಬಂಧಗಳು, ವಿಜ್ಞಾನ, ತಂತ್ರಜ್ಞಾನ, ತತ್ವಜ್ಞಾನ, ಹೀಗೆ ಎಲ್ಲ ವಿಷಯಗಳ ಮೂಲಕವೂ ಜನತೆಯ ಮೇಲೆ ತಮ್ಮ ವೈಚಾರಿಕತೆಯ ಪ್ರಭಾವ ಜಾಲವನ್ನು ಬೀಸಿರುತ್ತಾರೆ. ನಮ್ಮ ದೇಶದಲ್ಲಂತೂ ಪ್ರತಿಗಾಮಿ ವಿಚಾರಸರಣಿಯ ಮದ್ದುಗುಂಡನ್ನು ಪ್ರತಿಷ್ಠಿತ ಉಚ್ಚಜಾತಿ, ಉಚ್ಚವರ್ಗಗಳ ಹಳೆಯ ರೂಢಿ – ಸಂಪ್ರದಾಯಗಳು ಹಾಗೂ ಪಶ್ಚಿಮದ ಸಂಕಟಗ್ರಸ್ತ ಬಂಡವಾಳಶಾಹಿ ವಿಚಾರಸರಣಿಗಳು ಕೂಡಿಯೇ ಪೂರೈಸುತ್ತಿವೆ. ಹೀಗಿರುವಾಗ ಜೀವನದ ಪ್ರತಿಯೊಂದು ಮಹತ್ವದ ವಿಷಯದ ಬಗ್ಗೆಯೂ ಹಳೆಯ ರೀತಿರಿವಾಜುಗಳಿಗಿಂತ ಭಿನ್ನವಾದ ಹಾಗೂ ಬೂರ್ಜ್ವಾ ವಿಚಾರಸರಣಿಯ ಹೊಸ ದಾಳಿಗಳನ್ನು ಎದುರಿಸಲು ಶಕ್ಯವಿರುವಂಥ ಕ್ರಾಂತಿಕಾರಕ ವಿಚಾರಗಳನ್ನು ಎಡ ಚಳುವಳಿಯಲ್ಲಿಯ ಕಾರ್ಯಕರ್ತರು ಬೆಳೆಯಿಸಿಕೊಳ್ಳಬೇಕು ಹಾಗೂ ಜನರ ಮಧ್ಯೆ ಪಸರಿಸಬೇಕು. ಕ್ರಾಂತಿಕಾರಿ ವಿಚಾರಸರಣಿಯ ಆಧಾರಗಳಾದ ಬಂಡವಾಳಶಾಹಿ ವಿರೋಧ, ಜಾತಿ-ಕೋಮುವಾದ ವಿರೋಧ, ಸ್ತ್ರೀ-ಪುರುಷರ ಸಮಾನತೆ ಹಾಗೂ ವಿಜ್ಞಾನನಿಷ್ಠ ದೃಷ್ಟಿಕೋನಗಳು ನಮ್ಮ ವಿಚಾರ-ವ್ಯವಹಾರಗಳನ್ನು ನಿರ್ಧರಿಸಬೇಕು. ಹಳೆಯದನ್ನು ಹುಗಿಯುವ ಹಾಗೂ ಹೊಸದನ್ನು ಹುಟ್ಟಿಸುವ ಕ್ಷಮತೆ ಇಂಥ ಸರ್ವಾಂಗೀಣ ವಿಚಾರಸರಣಿಯಲ್ಲಿಯೇ ಇರಬಲ್ಲದು.

ಈ ದೃಷ್ಟಿಯಿಂದ ಈಗಿನಿಂದಲೇ ಶೋಷಿತ ಜನತೆಯಲ್ಲಿ ಈ ಸರ್ವಾಂಗೀಣ ಅರಿವನ್ನು ಬಿತ್ತುವ ಕಾರ್ಯವನ್ನು ಕೈಗೊಳ್ಳದಿದ್ದರೆ ಪೂರ್ಣ ಅರ್ಥದಲ್ಲಿ ಕ್ರಾಂತಿ ಸಂಭವಿಸುವುದು ಸಾಧ್ಯವಿಲ್ಲ, ಅದು ಬದುಕಲಾರದು, ಅದರಲ್ಲಿ ವಿಕೃತಿಗಳು ಹುಟ್ಟಿಕೊಳ್ಳುವ ಸಂಭವವಿದೆ. ಕ್ರಾಂತಿಯ ಭವಿಷ್ಯದ ಮುನ್ನಡೆ ಹಾಗೂ ಯಶಸ್ಸಿನ ವಿಚಾರವಂತೂ ಇರಲಿ, ಆದರೆ ಇಂಥ ಸರ್ವಾಂಗೀಣ ಜಾಗರಣ ಕಾರ್ಯವಿಲ್ಲದೇ ಭಾರತದಲ್ಲಿ ಕ್ರಾಂತಿಕಾರಕ ಶಕ್ತಿಯು ಬೆಳೆಯುವುದೂ ಸಾಧ್ಯವಿಲ್ಲ. ಜಾತೀಯ, ಕೋಮುವಾದದ, ಧಾರ್ಮಿಕ ಹಾಗೂ ಇತರ ಸಾಂಸ್ಕೃತಿಕ ಪ್ರಶ್ನೆಗಳ ಕುರಿತು ಹೊಸ ಅರಿವು ಮೂಡಿ ಸ್ಥಿರಗೊಳ್ಳದ ಹೊರತು ಇಲ್ಲಿಯ ಶ್ರಮಿಕ ವರ್ಗವು ಕ್ರಾಂತಿಕಾರಕವಾಗಿ ಕಾರ್ಯಪ್ರವೃತ್ತವಾಗುವುದು ಸಾಧ್ಯವಿಲ್ಲ.

ಈ ಸಂದರ್ಭದಲ್ಲಿ ಜಾಗರಣ ಮತ್ತು ಪ್ರಚಾರ ಇವುಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳುವುದು ಉಪಯುಕ್ತ. ತಾತ್ಕಾಲಿಕ ಸಾಧನೆಗಾಗಿ ನಡೆಸುವ ತಂಟೆಯಲ್ಲಿಯ ಒಂದು ಪಕ್ಷವನ್ನು ಸಮರ್ಥಿಸಿ ನಿಷ್ಠುರವಾಗಿ ಧೋರಣೆ ಮಂಡಿಸುವ, ಆ ಕ್ಷಣದ ಕಾರ್ಯವನ್ನೇ ಕೇಂದ್ರ ಸ್ಥಾನದಲ್ಲಿರಿಸಿ, ಅದಕ್ಕೆ ಅತಿ ಹೆಚ್ಚಿನ ಮಹತ್ವ ನೀಡಿ ನಡೆಸಲಾಗುವ ಕಾರ್ಯವನ್ನು ಪ್ರಚಾರವೆಂದೆನ್ನಬಹುದು. ಆದರೆ ಸಾಮಾಜಿಕ ಹಾಗೂ ಐತಿಹಾಸಿಕ ಸ್ಥಿತಿಗತಿಗಳ ಹಾಗೂ ಸಂಘರ್ಷಗಳ ಮತ್ತು ವೈಚಾರಿಕ ನೈತಿಕ – ಸಾಂಸ್ಕೃತಿಕ ಪ್ರಶ್ನೆಗಳ ಅರಿವನ್ನು ಮೂಲಭೂತ ಪದ್ಧತಿಯಿಂದ, ತರ್ಕಬದ್ಧವಾಗಿ, ಸುಸಂಗತವಾಗಿ ಮಾಡಿಕೊಡುವ ಕಾರ್ಯವು ಜಾಗರಣ ಕಾರ್ಯವು. ಜಾಗರಣದ ಸ್ವರೂಪ ವ್ಯಾಪಕವಾದುದು; ಅದರ ಉದ್ದೇಶ ಕೂಡ ದೀರ್ಘಾವಧಿಯದ್ದು. ಕೆಲವು ವಿಶಿಷ್ಟ ಪ್ರಸಂಗಗಳಲ್ಲಿ ಜಾಗರಣ ಹಾಗೂ ಪ್ರಚಾರ ಕಾರ್ಯಗಳನ್ನು ಒಂದುಗೂಡಿಸಿ ಸಾಗಿಸಲು ಸಾಧ್ಯ. ಆದರೆ ಇನ್ನು ಕೆಲವೊಮ್ಮೆ ಹಾಗೆ ಸಾಧ್ಯವಿರಲಿಕ್ಕಿಲ್ಲ. ಅಂತೆಯೇ ಜಾಗರಣವು ಶೋಷಿತವರ್ಗದ ಒಟ್ಟು ಕ್ರಾಂತಿಕಾರಿ ಚಳುವಳಿಯ ಒಂದು ಭಾಗವೆಂದೇ ತಿಳಿದರೂ ಅದನ್ನು ಪ್ರಚಾರದಿಂದ ಬೇರೆ

(6ನೇ ಪುಟ ನೋಡಿ)

ನಂದಿದ ಕಿಡಿ

—ಕೈಫಿ ಆಜ್ಮಿ

[ಶಾಯರ್ – ಎ – ಇನ್‌ಕ್ವಿಲಾಬ್ (ಕ್ರಾಂತಿಕಾರೀ ಕವಿ) ಎಂದು ಖ್ಯಾತರಾಗಿದ್ದ ಉರ್ದು ಕವಿ ಜೋಶ್ ಮಲಿಹಾಬಾದಿ ಕಳೆದ ಏಪ್ರಿಲ್‌ನಲ್ಲಿ ಇಸ್ಲಾಮಾಬಾದ್‌ನಲ್ಲಿ ನಿಧನರಾದರು. ಅದಮ್ಯ ರೋಷದಿಂದ ಬೆಳಗಿದ, ಮಾನವೀಯತೆಗೆ ವಿರೋಧವಾದ ಸಂಕುಚಿತವಾದ, ಮತಾಂಧತೆಯ ವಿರುದ್ಧ ಯಾರಿಗೂ ತಲೆಬಾಗದೆ ಅನವರತ ಹೋರಾಟ ಮಾಡಿದ ಮಹಾಕವಿ ಇನ್ನಿಲ್ಲ. ಜೀವನಪರ್ಯಂತ ಸಾಮ್ರಾಜ್ಯಶಾಹಿಯ ವಿರುದ್ಧ, ಸರ್ವಾಧಿಕಾರದ ವಿರುದ್ಧ ಅನವರತ ಹೋರಾಟ ಮಾಡಿದ ಧೀಮಂತ ವ್ಯಕ್ತಿ ಅವರು.

1924 ರಲ್ಲಿ ಹೈದರಾಬಾದ್ ನಿಜಾಮನಲ್ಲಿ ಜೋಶ್ ಉದ್ಯೋಗಿಗಳಾಗಿದ್ದಾಗ ನಿಜಾಮ ಆಡಳಿತದ ವಿರುದ್ಧ ಕೆಂಡಕಾರಿದ್ದಕ್ಕಾಗಿ ಜೋಶ್ ಕೆಲಸ ಕಳೆದುಕೊಳ್ಳಬೇಕಾಯಿತು. ಮುಂದೆ ಸ್ವಾತಂತ್ರ್ಯ ಸಮರದ ವಿವಿಧ ಘಟ್ಟಗಳಲ್ಲಿ ಜನರನ್ನು ಬ್ರಿಟೀಶರವಿರುದ್ಧ ಬಡಿದೆಬ್ಬಿಸುವ ಕಾರ್ಯವನ್ನು ಜೋಶ್ ಕೈಗೊಂಡರು. ಜನತೆಯ ಶೋಷಕರನ್ನು ತಮ್ಮ ವೈರಿಗಳೆಂದೇ ಭಾವಿಸಿದ್ದ ಜೋಶ್ ಅಂಥವರ ವಿರುದ್ಧ ಸೆಣಸಿದರು. ಜೋಶ್ ತಮ್ಮ ಕೊನೆಯುಗಳಿಗೆಯಲ್ಲಿ ಪಾಕೀಸ್ತಾನದ ಮಿಲಿಟರಿ ಸರ್ವಾಧಿಕಾರಿ ಶಕ್ತಿಗಳ ಕೈಯಲ್ಲಿ ಸಿಕ್ಕು ಹತಾಶರಾಗಿದ್ದಂತೆ ಕಂಡು ಬಂದರೂ ಕಾವನ್ನು ಕಳೆದುಕೊಂಡಿರಲಿಲ್ಲ.

1896ರಲ್ಲಿ ಉ. ಪ್ರದೇಶದ ಮಲಿಹಾಬಾದ್‌ನಲ್ಲಿ ಜನಿಸಿದ ಜೋಶ್ ಚಿಕ್ಕಂದಿನಿಂದಲೂ ಕವನ ರಚಿಸುವ ಗೀಳು ಕಟ್ಟಿಕೊಂಡರು. ಈ ಗೀಳಿನಿಂದ ಮಗ ಮುಂದೆ ಉಪವಾಸ ಬೀಳಬಹುದೆಂಬ ಭಯದಿಂದ ಜೋಶ್‌ರ ತಂದೆ ಮಗ ಕವಿಯಾಗುವುದನ್ನು ವಿರೋಧಿಸಿದರು. ತಂದೆಯ ಉಗ್ರ ವಿರೋಧವನ್ನು ಲೆಕ್ಕಿಸದೇ ಶಬೀರ್ ಹಸೇನ್ (ಜೋಶ್‌ರ ನಿಜ ಹೆಸರು) ಜೋಶ್ ಮಲಿಹಾಬಾದಿಯಾಗಿ ಪರಿವರ್ತನೆಗೊಂಡರು. ಜೋಶ್‌ರ ನಿರ್ಧಾರದಿಂದ ಅವರನ್ನು ವಿಚಲಿತಗೊಳಿಸುವ ಪ್ರಯತ್ನ ಕೇವಲ ಅವರ ತಂದೆ ಮಾತ್ರವಲ್ಲ, ಹೈದರಾಬಾದ್ ನಿಜಾಮ, ಬ್ರಿಟೀಷ್ ಆಡಳಿತಗಾರರು, ಪಾಕೀಸ್ತಾನದ ಸರ್ವಾಧಿಕಾರಿಗಳು ಕೈಗೊಂಡರೂ ಸಫಲತೆ ಪಡೆಯಲಿಲ್ಲ.

ಒಂದು ಸಲ ಅವರ ಕವನ ಸಂಗ್ರಹವನ್ನು ಜಪ್ತು ಮಾಡಲು ಬ್ರಿಟೀಷ್ ಪೋಲಿಸರು ಅವರ ಮನೆ ತಪಾಸಣೆ ಕೈಕೊಂಡರು. ಆ ಸಮಯದಲ್ಲಿ ಜೋಶ್ ಹೀಗೆಂದರು ;

ಬೆಂಕಿಯನ್ನುಗುಳುವ
ನನ್ನ ಕವನಗಳನ್ನು
ಅಲ್ಮೇರಾಗಳಲ್ಲಿ ಹುಡುಕುವಿರಾ ?
ಅವು ಅಲ್ಲಿ ಸಿಕ್ಕುತ್ತವೆಂದು
ಭಾವಿಸಿರುವಿರಾ ?
ಬನ್ನಿ ! ಬನ್ನಿ ! ನನ್ನ
ಹೃದಯವನ್ನು ಶೋಧಿಸಿ:
ಅಲ್ಲಿ ನೀವು ಜ್ವಲಿಸುತ್ತಿರುವ
ಬೆಂಕಿಯನ್ನು ಕಾಣಬಲ್ಲಿರಿ.

ದೀರ್ಘ ಹೋರಾಟದ ನಂತರ ವಿಭಜನೆಯೊಂದಿಗೆ ಸ್ವಾತಂತ್ರ್ಯ ದೊರಕಿದಾಗ ಜೋಶ್ ತುಂಬ ದುಃಖಿತರಾಗಿದ್ದರು. ಜನತೆಯನ್ನು ಹರಿದು ತಿನ್ನುವ ವಿದೇಶಿ ಶೋಷಕರು ಹೋಗಿ, ಸ್ವದೇಶಿ ಶೋಷಕರು ಅಧಿಕಾರಕ್ಕೆ ಬಂದಾಗ, ಯಾವ ಬದಲಾವಣೆಯನ್ನೂ ಕಾಣದ ಜೋಶ್ ಹೀಗೆ ಬರೆದರು ;

ರಕ್ತ ಹೀರುವ ಸೈತಾನರು ಒಂದೇ ರಾತ್ರಿಯಲ್ಲಿ ಮನುಷ್ಯರಾದರು.

ದ್ರೋಹಿಗಳು ಜನರ ಮುಂದಾಳುಗಳಾದರು.

[ಸೈತಾನ್ ಏಕ್ ಹೀ ರಾತ್ ಮೇ ಇನ್ಸಾನ್ ಬನ್‌ಗಯೇ, ಜಿತನೆ ನಮ್ಮಕ್-ಹರಾಮ ಥೆ ಕಪ್ತಾನ್ ಬನ್‌ಗಯೇ].

ಜೋಶ್ ಪಾಕೀಸ್ತಾನಕ್ಕೆ ತೆರಳಿದ ಮೇಲೆ ಅಲ್ಲಿನ ಮಿಲಿಟರಿ ಆಡಳಿತಗಾರರ ಕಾಕ ದೃಷ್ಟಿಗೆ ಒಳಗಾದರು. ತಮ್ಮ ತಾಳಕ್ಕೆ ಕುಣಿಯದ, ಯಾರಿಗೂ ತಲೆಬಾಗದ ಆ ಮಹಾ ಚೇತನಕ್ಕೆ 'ದ್ರೋಹಿ' ಎಂಬ ಹಣೆಪಟ್ಟಿ ಅಂಟಿಸಿದರು. ಅವರ ಬದುಕು ದುರ್ಭರವಾಗುವಂತೆ ಮಾಡಿದರು. ಕೊನೆಗಾಲದಲ್ಲಿ ರೇಡಿಯೋ, ಟಿ.ವಿ. ಕಾರ್ಯಕ್ರಮಗಳಲ್ಲೂ ಅವರನ್ನು ಭಾಗವಹಿಸದಂತೆ ಮಾಡಿ ಬಾಯಿ ಮುಚ್ಚಿಸಲು ಯತ್ನಿಸಲಾಯಿತು.

ಕೊನೆಗೂ ಜೋಶ್ ಸತ್ತರು. ಆದರೆ ತಲೆಬಾಗಲಿಲ್ಲ.

ಜೋಶ್ ನಿಧನರಾದ ಸಂದರ್ಭದಲ್ಲಿ ಅವರ ಸಹವರ್ತಿಯಾಗಿದ್ದ ಕವಿ ಕೈಫಿ ಆಜ್ಮಿ ಜೋಶ್‌ರ ಕುರಿತು ಬರೆದ ಕಿರು ಲೇಖನವನ್ನು ನಾವಿಲ್ಲಿ ಪ್ರಕಟಿಸುತ್ತಿದ್ದೇವೆ. ಕೈಫಿಯವರ ಲೇಖನವನ್ನು ಕಾಂ। ಇಕ್ಬಾಲ್ ಅನುವಾದಿಸಿದ್ದಾರೆ.]

ಉರ್ದುವಿನ ಪ್ರಸಿದ್ಧ ಕವಿ ಜೋಶ್ ಮಲಿಹಾಬಾದಿಯವರು ತಮ್ಮ 81ನೇ ವಯಸ್ಸಿನಲ್ಲಿ ಇಸ್ಲಾಮಾಬಾದ್‌ನಲ್ಲಿ ಕೊನೆಯುಸಿರೆಳೆದರು. ಬೊಂಬಾಯಿನಲ್ಲಿ ದೂರದರ್ಶನದಲ್ಲಿ ಸುದ್ದಿ ಓದುವವನು ಈ ಸುದ್ದಿಯನ್ನು ನಿರ್ಲಿಪ್ತವಾಗಿ ತಿಳಿಸಿದ. ನಾನು ಈ ಸುದ್ದಿ ಕೇಳಿ ಯೋಚನಾಮಗ್ನನಾದೆ. ಜೋಶ್‌ರ ನಿಧನದಂತಹ ಆಘಾತಕರ ಸುದ್ದಿಯನ್ನು ಇಷ್ಟೊಂದು ನಿರ್ಲಿಪ್ತನಾಗಿ ಹೇಳುವುದೇ ? ಆಕಸ್ಮಿಕವಾಗಿ ಸಮುದ್ರ ಬತ್ತಿ ಹೋದರೆ, ಕುತುಬ್ ಮೀನಾರ್ ಕುಸಿದುಬಿದ್ದರೆ, ತಾಜಮಹಲ್ ತುಂಡಾದರೆ ಅಥವಾ ಹಿಮಾಲಯ ಭೂತಾಯಿಯ ಗರ್ಭದಲ್ಲಿ ಲೀನವಾದರೂ ಸಹ ಈ ಸುದ್ದಿ ಪ್ರಸರಣ ಕೇಂದ್ರಗಳು ತಮ್ಮ ಇಂತಹ ನಿರ್ಲಿಪ್ತ ಕಳಪೆ ಶಬ್ದಗಳಲ್ಲೇ ಬಿತ್ತರಿಸುವರೇ ? ಎಂಬುದೇ ನನ್ನ ಯೋಚನೆಯಾಗಿದೆ.

ಜೋಶ್ ಸಾಹೇಬರು ಇಲ್ಲವಾದಂತಹ ಪ್ರಪಂಚದಲ್ಲಿ ನಾವಿಂದು ಬದುಕುತ್ತಿರುವುದು ನನಗೆ ವಿಚಿತ್ರವಾಗಿ ಕಾಣುತ್ತದೆ. ನೀವು ಒಬ್ಬರೇ ಕುಳಿತು ಜೋಶ್‌ರವರ ವ್ಯಕ್ತಿತ್ವ ಸಿದ್ಧಪಡಿಸಲು ಸಾಧ್ಯವಿಲ್ಲ. ಯಾವಾಗ ಜೋಶ್ ಸಾಹೇಬರ ಪ್ರತಿಬಿಂಬ ನಿಮಗೆ ನಿಲುಕುವದೋ ಆಗ ಸಮುದ್ರದ ಪ್ರತಿಬಿಂಬ ನಿಲುಕುವುದು, ಹಿಮಾಲಯದ ಪ್ರತಿಬಿಂಬ ನಿಮ್ಮ ಆಲೋಚನೆಯ ತೆಕ್ಕೆಗೆ ಸಿಕ್ಕುವುದು.

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರ ವಿರುದ್ಧ ನಡೆದ ಧೀರ ಸಮರದಲ್ಲಿ ಜೋಶ್ ಸಾಹೇಬರು ತಮ್ಮ ಹರಿತ ಲೇಖನಿಯ ಮೂಲಕ ಜನರನ್ನು ಬಡಿದೆಬ್ಬಿಸಿದರು. ಎಂಥದೇ ಸಂದರ್ಭದಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಬದಲಾಗಿ ಸಂದರ್ಭಸಾಧಕರನ್ನು ಜೋಶ್ ಸಾಹೇಬರು ಕಟುವಾಗಿ ಟೀಕಿಸುತ್ತಿದ್ದರು. ಅಲ್ಲದೇ ಈ ಶಕ್ತಿಗಳ ಬಗ್ಗೆ ಸದಾ ಎಚ್ಚರವಾಗಿರುವಂತೆ ಜನತೆಗೆ ಹೇಳುತ್ತಿದ್ದರು.

ಸಾಮಾನ್ಯವಾಗಿ ಕವಿಗಳು ಕಲ್ಪನಾ ಲೋಕದಲ್ಲಿ ಜೀವಿಸುವವರು. ಇಂತಹ ಕಾಲ್ಪನಿಕ ಲೋಕದಿಂದ ವಾಸ್ತವಿಕ ಲೋಕದ ಕಡೆ ಮುಖ ತಿರುಗಿಸುವವರು ಕೇವಲ ಕೆಲವೇ ಜನರು ಮಾತ್ರ. ಕಾರಣ ಕಲ್ಪನಾಲೋಕದ ಕವಿಗಳ ಕಾವ್ಯದ ಭಾಗಶಃ ಕಾವ್ಯದಲ್ಲಿ ಅಜ್ಞಾನದ ಕುರುಹು ಕಂಡು ಬರುತ್ತದೆ. ಇದನ್ನು ಪ್ರತಿಗಾಮಿ ಶಕ್ತಿಗಳು ಚೆನ್ನಾಗಿ ಉಪಯೋಗಿಸಿಕೊಂಡು ಪ್ರಗತಿಪರ ವಿಚಾರಗಳಿಗೆ ಕುಂದು ತರುವ ಪ್ರಯತ್ನ ಮಾಡುವರು. ಆದರೆ ಜೋಶ್ ಸಾಹೇಬರ ಲೇಖನಿಯ ಧ್ವನಿ ಗಟ್ಟಿಯಾದ ತಳಪಾಯ ಹೊಂದಿ, ಪ್ರಖರ ಶೈಲಿಯಿಂದ ಕೂಡಿ ಪ್ರತಿಗಾಮಿಗಳ ಹಿಡಿತಕ್ಕೆ ಸಿಕ್ಕುತ್ತಿರಲಿಲ್ಲ.

ಸ್ವಾತಂತ್ರ್ಯ ಸಂಗ್ರಾಮದ ಸಮರದಲ್ಲಿ ಬೇರೆ ಬೇರೆ ತರದ ತಿರುವುಗಳು ಬಂದವು. ಈ ಎಲ್ಲ ತಿರುವುಗಳನ್ನು ನಾವು ಜೋಶ್ ಸಾಹೇಬರ ಕಾವ್ಯದಲ್ಲಿ ಕಾಣಬಹುದು.

ಆ ಸಮಯದಲ್ಲಿ ಒಂದು ಕಡೆ ಗಾಂಧೀಜಿ ಮತ್ತು ಅವರ ಅನುಯಾಯಿಗಳು ಒಪ್ಪಂದ ಮಾಡಿಕೊಳ್ಳುವ ಕಾರ್ಯ ಜಾರಿಯಿದ್ದರೆ, ಅದೇ ಸಮಯದಲ್ಲಿ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು ಸ್ವಾತಂತ್ರ್ಯಕ್ಕಾಗಿ ಬಲಿದಾನವನ್ನು ಗೈಯ್ದ ಕಾಲಘಟ್ಟವಾಗಿತ್ತು. ನ್ಯಾಶನಲ್ ಕಾಂಗ್ರೆಸ್ ಅಂದು ಪ್ರಜಾಪ್ರಭುತ್ವವಾದಿ ಹಿಂದು ಮತ್ತು ಮುಸ್ಲಿಂರ ಕೇಂದ್ರವಾಗಿತ್ತು. ಕೆಲವು ಸಂಕುಚಿತವಾದಿ ನಾಯಕರ ಕಾರಣದಿಂದಾಗಿ, ಅದರಲ್ಲಿಯೂ ಒಡಕು ಪ್ರಾರಂಭವಾಗಿತ್ತು. ನಿಧಾನವಾಗಿ ಮುಸ್ಲಿಂರು ಮುಸ್ಲಿಂ ಲೀಗ್ ಕಡೆ ಆಕರ್ಷಿತರಾಗ ಹತ್ತಿದ್ದರು.

ಈ ಬಿರುಕಿನ ಕಾರಣದಿಂದಾಗಿ ಬ್ರಿಟಿಷರು ಮತ್ತೇ ಘಟ್ಟಿಯಾಗಿ ನೆಲೆಯೂರತೊಡಗಿದ್ದರು. ಇದೇ ಸಮಯದಲ್ಲಿ ಖಿಲಾಫತ್ ಚಳುವಳಿಯು ಪ್ರಾರಂಭವಾಯಿತು. ಈ ಚಳುವಳಿ ಮುಸ್ಲಿಂರ ಮನಸ್ಸಿನಲ್ಲಿ ಬ್ರಿಟಿಷರ ವಿರುದ್ಧ ದ್ವೇಷ ಹುಟ್ಟುವಂತೆಮಾಡಿತು. ಅಲ್ಲದೇ ಹಿಂದೂ–ಮುಸ್ಲಿಂರ ಮಧ್ಯ ಬೆಳೆಯುತ್ತಿದ್ದ ಜಾತೀಯ ದ್ವೇಷವನ್ನು ನಿಲ್ಲಿಸಿ ಅವರಿಬ್ಬರ ಮಧ್ಯ ಒಗ್ಗಟ್ಟು ಹುಟ್ಟುವಂತೆ ಮಾಡಿತು.

ಈ ಸಂದರ್ಭದಲ್ಲಿ ಜೋಶ್ ಸಾಹೇಬರು ಹಿಂದೂ ಮುಸ್ಲಿಂ ಸಖ್ಯವನ್ನು ಎತ್ತಿ ಹಿಡಿಯುವ ಕವನ ರಚಿಸಿದರು.

ಈ ಹೊಸ ಅಲೆ ತಣ್ಣಗಾಗುತ್ತ ನಡೆದಂತೆ ಮತೀಯವಾದಿಗಳು ಮತ್ತೆ ವಿದ್ವೇಷದ ಬೀಜ ಬಿತ್ತಲು ಆರಂಭಿಸಿದರು. ಈ ಕೋಮುವಾದಿಗಳ ಬಣ್ಣ ಬಯಲು ಮಾಡಲು ಜೋಶ್ ಅವಿಶ್ರಾಂತವಾಗಿ ಶ್ರಮಿಸಿದರು.

ಉರ್ದುಸಾಹಿತ್ಯ ಕ್ಷೇತ್ರದಲ್ಲಿ ಜೋಶ್‌ರ ಧ್ವನಿಗಟ್ಟಿಯಾಗಿ, ಎತ್ತರಕ್ಕೆ ನೆಗೆದಿತ್ತು. ಅತ್ಯಂತ ಪ್ರಭಾವಿತವಾಗಿತ್ತು. ಈ ಒಂದು ಪ್ರಭಾವಿತ ಧ್ವನಿಯ ಆಶ್ರಯದಲ್ಲಿ ಪೂರ್ಣ ಒಂದು ಪೀಳಿಗೆಯೇ ತರಬೇತಿ ಪಡೆಯುತ್ತಿತ್ತು. ಈ ಪೀಳಿಗೆಯು ಜಾತ್ಯಾತೀತತೆ, ಮಾನವೀಯತೆ, ದೇಶಪ್ರೇಮ ಮತ್ತು ಕ್ರಾಂತಿಕಾರೀ ಮನೋಭಾವನೆ ಹೊಂದಿರುವಂಥ ಪೀಳಿಗೆಯಾಗಿತ್ತು.

' ಜೋಶ್ ಮರಣಹೊಂದಿದ್ದರೂ ಅವರ ಧ್ವನಿ ಜೀವಂತವಿದೆ. ನಾವು ಅವರ ಧ್ವನಿ ಮತ್ತು ಸಂದೇಶಗಳನ್ನು ನಮ್ಮ ಅತ್ಯಂತ ಅಮೂಲ್ಯ ಆಸ್ತಿ ಎಂದು ತಿಳಿದು ಅದನ್ನು ಯಾವಾಗಲೂ ಎದೆಗವಚಿಕೊಂಡಿರೋಣ.

●

ಎಸ್.ಎಫ್.ಐ. ಮುಖಂಡರಿಗೆ ಚೆಸ್ ಪ್ರಶಸ್ತಿ

ಮೈಸೂರು ಜಿಲ್ಲಾ ಚೆಸ್ ಎಸೋಸಿಯೇಶನ್ ಇತ್ತೀಚೆಗೆ ಮೈಸೂರಿನಲ್ಲಿ ನಡೆಸಿದ ಚೆಸ್ ಸ್ಪರ್ಧೆಯಲ್ಲಿ ಇಲ್ಲಿನ ಎಸ್. ಜೆ. ಸಿ. ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ಹಾಗು ಮೈಸೂರು ನಗರ ಎಸ್. ಎಫ್. ಐ. ಅಧ್ಯಕ್ಷರಾದ ಕಾಂ। ಜಿ. ಸಲಿಲ್‌ರವರು ಆರು ಅಂಕಗಳೊಂದಿಗೆ ಮೂರನೇ ಸ್ಥಾನವನ್ನು ಪಡೆದಿರುತ್ತಾರೆ. ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಸಲಿಲ್‌ರವರು 7 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದ ಎ. ಕೆ. ಪ್ರಕಾಶ್‌ರವರೊಂದಿಗೆ ಆಟವನ್ನು ಡ್ರಾ ಮಾಡಿಕೊಂಡರು. ಪಂದ್ಯದುದ್ದಕ್ಕೂ ಸಲೀಲ್ ಪರಾಜಿತರಾಗದೇ ಉಳಿದಿದ್ದರು. ಪ್ರಶಸ್ತಿ ಪಡೆದ ಸಲಿಲ್‌ರವರನ್ನು ಮೈಸೂರು ನಗರ ಎಸ್. ಎಫ್. ಐ. ಘಟಕ ಅಭಿನಂದಿಸಿದೆ.

●

ಐ.ಟಿ.ಸಿ. ಚುನಾವಣೆ- ಕಾಂ. ಸೂರಿ ಪುನರಾಯ್ಕೆ

ಮೇ 19 ರಂದು ಬೆಂಗಳೂರಿನಲ್ಲಿ ನಡೆದ ಐ. ಟಿ. ಸಿ. ಕಾರ್ಮಿಕ ಸಂಘದ ಚುನಾವಣೆಯಲ್ಲಿ ಸಂಘದ ಅಧ್ಯಕ್ಷರಾಗಿ ಕಾಂ। ಸೂರ್ಯನಾರಾಯಣರಾವ್ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಈ ಚುನಾವಣೆ ನಡೆಯದಂತೆ ಆಡಳಿತ ವರ್ಗದ ಚೇಲಾಗಳು ಅನೇಕ ಕುತಂತ್ರ ಹೂಡಿದ್ದರು. ಸಿವಿಲ್ ಕೋರ್ಟಿಗೆ ಹೋಗಿ ತಡೆ ಅರ್ಜಿ ತರುವ ಯತ್ನವೂ ನಡೆದಿತ್ತು. ಅದರಲ್ಲೂ ಯಶಸ್ಸು ಸಿಗಲಿಲ್ಲವಾದ್ದರಿಂದ ಚುನಾವಣೆ ಬಹಿಷ್ಕರಿಸಬೇಕೆಂದು ಕಾರ್ಮಿಕರಿಗೆ ಮನವಿ ಮಾಡುವ ಹಸ್ತಪತ್ರಿಕೆಗಳ ವಿತರಣೆಯೂ ನಡೆದಿತ್ತು.

ಈ ಎಲ್ಲ ಕುತಂತ್ರಗಳನ್ನು ಧಿಕ್ಕರಿಸಿ ಐ.ಟಿ.ಸಿ. ಕಾರ್ಮಿಕರು ಬಹುಸಂಖ್ಯೆಯಲ್ಲಿ ಚುನಾವಣೆಯಲ್ಲಿ ಪಾಲ್ಗೊಂಡಿದ್ದರು. ಚುನಾವಣಾಧಿಕಾರಿಯಾಗಿ ಕಾಂ। ಕೆ. ಆರ್. - ವೆಂಕಟೇಶಗೌಡ (ಅಡ್ವೋಕೇಟ್) ಅವರು ಕಾರ್ಯನಿರ್ವಹಿಸಿದರು. ಚುನಾವಣೆ ಅತ್ಯಂತ ಶಾಂತಯುತವಾಗಿ ನಡೆಯಿತು. ಮತದಾನ ಮುಗಿದೊಡನೆ ಕುತೂಹಲದಿಂದ ಫಲಿತಾಂಶ ಎದರು ನೋಡುತ್ತಿದ್ದರು.

ಪ್ರಧಾನ ಕಾರ್ಯದರ್ಶಿಯಾಗಿ ಕಾಂ। ಅಂಕಣ್ಣ, ಉಪಾಧ್ಯಕ್ಷರಾಗಿ ಕಾಂ। ಮೂರ್ತಿ ಮತ್ತು ಕೋಶಾಧ್ಯಕ್ಷರಾಗಿ ಸಾಂಬಶಿವ್ ಅವರುಗಳು ಆಯ್ಕೆಯಾಗಿದ್ದಾರೆ. ಶಾಂತಯುತವಾಗಿ ನಡೆದ ಮತದಾನದಲ್ಲಿ ಭಾಗವಹಿಸಿದ್ದಕ್ಕಾಗಿ ಕಾಂ। ಸೂರ್ಯನಾರಾಯಣರಾವ್ ಅವರು ಐ. ಟಿ. ಸಿ. ಕಾರ್ಮಿಕರನ್ನು ಅಭಿನಂದಿಸಿದ್ದಾರೆ.

ಚುನಾಯಿತ ಪ್ರತಿನಿಧಿಗಳನ್ನು ಅಂಗೀಕರಿಸದಿದ್ದರೆ ತೀವ್ರ ಹೋರಾಟದ ತೀರ್ಮಾನವನ್ನು ಐ. ಟಿ. ಸಿ. ಕಾರ್ಮಿಕರು ತಳೆದಿದ್ದಾರೆ.

○

ನೇಕಾರ ಕಾರ್ಮಿಕರ ಧರಣಾ ಮುಷ್ಕರ

ವಿನಾಕಾರಣ ಕೆಲಸದಿಂದ ವಜಾ ಮಾಡಿರುವುದನ್ನು ಪ್ರತಿಭಟಿಸಿ, ಹೆಣ್ಣು ಮಕ್ಕಳಿಗೆ ವೇತನ ಸಹಿತ ಹೆರಿಗೆ ರಜಾ ಕೊಡಬೇಕು, ಮುಂತಾದ ಬೇಡಿಕೆಗಳನ್ನು ಮಂಡಿಸಿ ರಾಣಿಬೆನ್ನೂರಿನಲ್ಲಿ 31–5–82 ರಿಂದ ಧರಣಾ ಮುಷ್ಕರ ಪ್ರಾರಂಭವಾಗಿದೆ.

ಇತರ ನೇಯ್ಗೆ ಕೇಂದ್ರಗಳಾದ ರಬಕವಿ, ಬನಹಟ್ಟಿ, ಶಿಗ್ಲಿ, ಬೆಳಗಾಂವಿ ಮತ್ತಿತರ ಕಡೆ ನೇಕಾರರಿಗೆ ದೊರೆಯುವ ಬೋನಸ್, ಹೆಚ್ಚು ಕೂಲಿ ಇನ್ನಿತರ ಸೌಲಭ್ಯಗಳು ರಾಣಿಬೆನ್ನೂರು ಕಾರ್ಮಿಕರಿಗೆ ದೊರೆಯುತ್ತಿಲ್ಲ.

○

ಎಡ ಚಳುವಳಿಯಲ್ಲಿ ಜಾಗರಣ ಕಾರ್ಯದ ಮಹತ್ವ

(4ನೇ ಪುಟದಿಂದ)

ಯಾಗಿ ಗುರುತಿಸಿ ಅದಕ್ಕೆ ತಕ್ಕ ವಿಧಾನ, ಮಾಧ್ಯಮಗಳನ್ನು ಬಳಸಿ ಸಾಗಿಸಬೇಕು.

ಜಾಗರಣ ಕಾರ್ಯವನ್ನು ನಡೆಸುವವರು ಯಾರು ? ಶೋಷಿತ ಜನತೆಯ ಆರ್ಥಿಕ - ಸಾಮಾಜಿಕ – ರಾಜಕೀಯ ಹೋರಾಟಗಳಲ್ಲಿ ಕಮ್ಯುನಿಸ್ಟ್ ಪಕ್ಷ ಮುಂಚೂಣಿಯಲ್ಲಿರಬೇಕಾದಂತೆಯೇ ವೈಚಾರಿಕ ವರ್ಗ ಸಂಘರ್ಷದಲ್ಲಿಯೂ ಪಕ್ಷವು ಮುಂಚೂಣಿ ಪಾತ್ರ ವಹಿಸಬೇಕೆಂಬುದು ಸ್ಪಷ್ಟವೇ ಆಗಿದೆ. ಇಂದಿನ ವಿಶಿಷ್ಟ ಸಂದರ್ಭದಲ್ಲಿಯ ಈ ಮಾತಿನ ಅರ್ಥ ವೈಚಾರಿಕ-ಸಾಂಸ್ಕೃತಿಕ ಕ್ಷೇತ್ರದಲ್ಲಿಯ ಎಲ್ಲ ಎಡ ಶಕ್ತಿಗಳು (ತಮ್ಮ ನಡುವಿನ ಆಂತರಿಕ ವೈಚಾರಿಕ ಸಂಘರ್ಷವನ್ನು ನಡೆಸುತ್ತಿರುವುದರ ಜೊತೆಗೆಯೇ) ಸಾಧ್ಯವಿದ್ದಲ್ಲೆಲ್ಲ ಐಕ್ಯತೆಯಿಂದ ಹಾಗೂ ಧೃಡತೆಯಿಂದ ಜಾಗರಣ ಕಾರ್ಯವನ್ನು ಎತ್ತಿಕೊಂಡು ಜನತೆಯ ಅರಿವಿನಲ್ಲಿ ಎಡ ವಿಚಾರ ಸರಣಿಯನ್ನು ಪ್ರಚುರಗೊಳಿಸಬೇಕು, ಅದರೆಡೆಗೆ ಒಲವು ಹೆಚ್ಚುವಂತೆ ಮಾಡಬೇಕು. ಈ ಕಾರ್ಯವನ್ನು ಎಡ ಚಳುವಳಿಯಲ್ಲಿಯ ಬುದ್ಧಿಜೀವಿ – ಕಲಾವಿದರು ಸಮರ್ಥವಾಗಿ ನಿರ್ವಹಿಸಬಲ್ಲರೆಂಬುದು ಸ್ಪಷ್ಟವಿದೆ. ಆದರೆ ಎಂಥ ಬಗೆಯ ಬುದ್ಧಿಜೀವಿಗಳು ? ಬೌದ್ಧಿಕ ಹಾಗೂ ಶಾರೀರಿಕ ಶ್ರಮ ಇವುಗಳಲ್ಲಿ ಸಾಮಾಜಿಕ ಶ್ರಮವಿಭಜನೆ ಉಂಟಾದ ಯಾವುದೇ ವರ್ಗ ಸಮಾಜದಲ್ಲಿಯೂ ಕೂಡ ಒಂದು ಬುದ್ಧಿಜೀವಿ ವಿಭಾಗ ನಿರ್ಮಾಣಗೊಳ್ಳುತ್ತದೆ. ಕಾರಕೂನರು, ಶಿಕ್ಷಕರು, ಇಂಜನಿಯರರು, ವಿಜ್ಞಾನಿಗಳು, ವ್ಯವಸಾಯಿಕ ವೃತ್ತಿಯಲ್ಲಿರುವವರು, ಕಲಾವಿದರು ಇವರುಗಳಿಂದ ಕೂಡಿದ ಈ ವಿಭಾಗದ ಜನರು ತಮ್ಮ ಬುದ್ಧಿಯನ್ನುಪಯೋಗಿಸಿ ಬದುಕು ಸಾಗಿಸುತ್ತಾರೆ. ತಮ್ಮ ಕಾರ್ಯದಿಂದ ಸರ್ವಸಾಧಾರಣ ಸಾಮಾಜಿಕ ಅಂವಿನ ಮೇಲೆ ಪರಿಣಾಮ ಬೀರುವ ಈ ಬುದ್ಧಿಜೀವಿ ವಿಭಾಗದಲ್ಲಿ ಎರಡು ಬಣಗಳಿರುತ್ತವೆ. ಪ್ರಸಕ್ತ ಸಮಾಜ ವ್ಯವಸ್ಥೆಯನ್ನು ರಕ್ಷಿಸಲು, ಬಂಡವಾಳಶಾಹಿ ವರ್ಗದ ಪ್ರಭುತ್ವವನ್ನು ಖಾಯಂ ಆಗಿಡಲು ಪೋಷಕವಾಗುವಂಥ ವಿಚಾರಗಳಿಗೆ ಜನ್ಮ ಹಾಗೂ ಆಕಾರ ಕೊಡುವ ಕೆಲಸ ಮಾಡುವ ಬೂರ್ಜ್ವಾ ಬುದ್ಧಿಜೀವಿಗಳದ್ದು ಒಂದು ಬಣ. ಇನ್ನೊಂದು ಬಣ ಶೋಷಿತ ಜನತೆಯ ಕೈಯಲ್ಲಿ ಪ್ರಭುತ್ವ ಬಂದು ಶೋಷಣೆ ರಹಿತ ಸಮಾಜದ ನಿರ್ಮಾಣ ಬಯಸುವ ಹಾಗೂ ಅದಕ್ಕಾಗಿ ಪ್ರಯತ್ನಪಡುವ ಬುದ್ಧಿಜೀವಿಗಳದ್ದು. ಈ ಎರಡನೇ ಬಣದ ಬುದ್ಧಿ ಜೀವಿಗಳು ಜಾಗರಣ ಕಾರ್ಯದಲ್ಲಿ ತಮ್ಮನ್ನು ತಾವೇ ಸವೆಸಿಕೊಳ್ಳಬಲ್ಲರು. ಈ ಬುದ್ಧಿಜೀವಿಗಳು ಕೇವಲ ವಿಚಾರದ ಸ್ತರದಲ್ಲಷ್ಟೇ ಅಲ್ಲ, ತಮ್ಮ ಇಡೀ ಇರುವಿಕೆಯೊಂದಿಗೆ ಸಮುದಾಯದ ಜೊತೆಗೆ ಸಂಬಂಧ ಸ್ಥಾಪಿಸಿಕೊಂಡಾಗ ಮಾತ್ರ ಈ ಕಾರ್ಯದಲ್ಲಿ ನಿಜವಾದ ಅರ್ಥದ ಸಮರ್ಪಿತ ದುಡಿಮೆ ಸಾಧ್ಯ. "ಭಾವನೆ ಹಾಗೂ ಆಕಾಂಕ್ಷೆಗಳ ಸ್ತರದಲ್ಲಿಯೂ ಕೂಡ ಸಮುದಾಯದೊಂದಿಗೆ ಸಂಬಂಧಗಳನ್ನು ಬೆಳೆಯಿಸಿಕೊಳ್ಳದೇ ವಿಚಾರವಂತನು ಇತಿಹಾಸ ಯಾತ್ರೆಯಲ್ಲಿ – ಸಮಾಜ ಕ್ರಾಂತಿ ಕಾರ್ಯದಲ್ಲಿ ಸಹಭಾಗಿಯಾಗಲಾರ" (ಗ್ರಾಮ್‌ಶಿ).

ಜಾಗರಣದ ಕಾರ್ಯವನ್ನು ಮೇಲೆ ಉಲ್ಲೇಖಿಸಿದ ಬಣದಿಂದ ಬರುವ ಬುದ್ಧಿಜೀವಿಗಳು ಮಾತ್ರ ನಿರ್ವಹಿಸಬಲ್ಲರೆಂಬುದೂ 'ತಪ್ಪು'. ಪ್ರತ್ಯಕ್ಷದಲ್ಲಿ ಕಾರ್ಮಿಕ ಮತ್ತು ಇತರ ಶೋಷಿತ ಜನತೆಯ ಮಧ್ಯದಿಂದ ಬೆಳೆದು ಬರುವ, ಆ ವರ್ಗದೊಂದಿಗೆ ಜೀವಂತ ಸಂಬಂಧ ಹೊಂದಿದ ವಿಚಾರವಂತ–ಕಲಾವಿದರ ಸ್ಥಾನ ಜಾಗರಣ ಕಾರ್ಯದಲ್ಲಿ ಇನ್ನೂ ಮಹತ್ವದ್ದು. "ಶ್ರಮಿಕ ವರ್ಗವು ಬ್ಯಾರಿಕೇಡುಗಳ (ತಡೆಗಟ್ಟೆಗಳು)ಲ್ಲಿ ಹಾಗೂ ರಣರಂಗದಲ್ಲಿ ತನ್ನ ವಿಜಯಗಳನ್ನು ಹೋರಾಡಿ ಗಳಿಸುವುದಕ್ಕೆ ಮೊದಲು, ತಾನು ಸಾಲಾಗಿ ಗಳಿಸಿದ ಅನೇಕ ವೈಚಾರಿಕ ವಿಜಯಗಳೊಂದಿಗೆ ಸಮೀಪಿಸುತ್ತಿರುವ ತನ್ನ ಆಳ್ವಿಕೆಯ ತಾಕೀತುಕೊಡುತ್ತದೆ" (ಮಾರ್ಕ್ಸ್), ಇದೇ ವಿಚಾರವನ್ನು ಗ್ರಾಮ್‌ಶಿ ಹೀಗೆ ಹೇಳುತ್ತಾನೆ : "ಸಾಮಾಜಿಕ ಪ್ರಭುತ್ವವನ್ನು ಗೆದ್ದುಕೊಳ್ಳಲು ಮುನ್ನಡೆಯುತ್ತಿರುವ ವರ್ಗದ ಒಂದು ಮಹತ್ವದ ಲಕ್ಷಣವೆಂದರೆ ಪರಂಪರಾಗತ ವಿಚಾರವಂತರನ್ನು ವಿಚಾರದ ಪಾತಳಿಯ ಮೇಲೆ ಗೆದ್ದುಕೊಂಡು ಆ ವಿಜಯಗಳನ್ನು ಆತ್ಮಗತಮಾಡಿಕೊಳ್ಳಲು ನಡೆಸಿರುವ ಆ ವರ್ಗದ ಸಂಘರ್ಷ. ಆದರೆ ಹೀಗೆ ಗೆದ್ದುಕೊಂಡು ಆತ್ಮಗತ ಮಾಡಿಕೊಳ್ಳುವ ಕ್ರಿಯೆಯು ಆ ಪ್ರಮಾಣದಲ್ಲಿ ತ್ವರಿತ್ವಾಗಿ ಹಾಗೂ ಪರಿಣಾಮಕಾರಿಯಾಗಿ ಸಾಗುತ್ತದೆ. ಯಾವ ಪ್ರಮಾಣದಲ್ಲಿ ಆ ವರ್ಗವು ಅದೇ ವೇಳೆಗೆ ತನ್ನ ಸ್ವಂತದ ಮಧ್ಯದಿಂದ ವಿಚಾರವಂತರನ್ನು ರೂಪಿಸಲು ಯಶಸ್ವಿಯಾಗುತ್ತದೆ." ದುಃಖ ಕಷ್ಟಗಳ ಆಳಗಳಿಂದ ಪಡೆದ ಜೀವನಾನುಭವಗಳ ತೀವ್ರತೆಯೊಂದಿಗೆ ಜ್ಞಾನ ಹಾಗೂ ವಿಚಾರಶಕ್ತಿಗಳ ಪ್ರಬುದ್ಧತೆಯನ್ನು ಹೊಂದಿದ ಶ್ರಮಿಕವರ್ಗದ ವಿಚಾರವಂತರು ಜನರ ಅರಿವಿನ ಮೇಲೆ ಅಸಾಧಾರಣ ಪ್ರಭಾವ ಬೀರಬಲ್ಲರು. ಆದ್ದರಿಂದ ಇಂಥವರು ಕ್ರಾಂತಿಕಾರಿ ಚಳವಳಿಯ ಇತರ ಕ್ಷೇತ್ರಗಳಂತೆಯೇ ವೈಚಾರಿಕ ಹಾಗೂ ಕಲಾ ಸಾಹಿತ್ಯ ಕ್ಷೇತ್ರಗಳಲ್ಲೂ ಕಾರ್ಮಿಕ ಹಾಗೂ ಇತರ ಶೋಷಿತ ವರ್ಗದಿಂದ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅಗ್ರಸ್ಥಾನದಲ್ಲಿ ಬರುವಂತಾಗಬೇಕು

ಜಾಗರಣ ಕಾರ್ಯದ ಮಾಧ್ಯಮಗಳು ಅನೇಕ ವಿಧವಾಗಿರಬಹುದು. ಜನರ ಒಲವನ್ನು ಆಕರ್ಷಿಸುವಂಥ ಅವರ ವಿಚಾರ ಶಕ್ತಿಗೆ ಪ್ರಚೋದನೆ ನೀಡುವಂಥ, ಅವರ ಜ್ಞಾನದ ಹಸಿವನ್ನು ಇಂಗಿಸಬಲ್ಲಂಥ, ಅವರಲ್ಲಿಯ ಸೃಜನಶೀಲತೆಯನ್ನು ಗೌರವಿಸುವಂಥ, ವರ್ಧಿಸುವಂಥ ಎಲ್ಲ ಮಾಧ್ಯಮ ವಿಧಾನಗಳನ್ನು ಬಳಸಬೇಕು. ಉದಾ: ಪುಸ್ತಕ, ಪತ್ರಿಕೆಗಳ ಪ್ರಕಟನೆ, ಪ್ರಗತಿಪರ ಕಲಾ-ಸಾಹಿತ್ಯಗಳ ಪ್ರದರ್ಶನ - ಪ್ರಚಾರ, ವಿಚಾರ ಸಂಕಿರಣ, ಅಭ್ಯಾಸ ಶಿಬಿರ ಇತ್ಯಾದಿ. ಜಾತಿ-ಕೋಮುವಾದ, ಸಾಮ್ರಾಜ್ಯವಾದಿಗಳ ಯುದ್ಧಖೋರತನ ಮುಂತಾದ ವಿಷಯಗಳ ಕುರಿತು ಸಾರ್ವತ್ರಿಕ ಜನಜಾಗೃತಿಯ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ವಿಜ್ಞಾನ ಚಳವಳಿಯ ಕಾರ್ಯಕ್ರಮಗಳನ್ನು ನಡೆಸಬೇಕು. ಹೀಗೆ ಅನೇಕ ವಿಧಗಳಿಂದ ಜಾಗರಣ ಕಾರ್ಯ ಸಾಧ್ಯ. ಇತರ ಮಾಧ್ಯಮಗಳಿಗೂ ಅನ್ವಯಿಸುವ ಚಳವಳಿಯಲ್ಲಿ ಎಡಪತ್ರಿಕೆಗಳು ನಿರ್ವಹಿಸಬೇಕಾದ ಕಾರ್ಯವೂ ಮಹತ್ವದ್ದು.

ಇಂಥ ಜಾಗರಣ ಕಾರ್ಯ ಶೋಷಿತ ಜನತೆ ತನ್ನ ಮುಂದಿರುವ ಗುರಿಯನ್ನು ಸಾಧಿಸಲು ಸಹಕಾರಿಯಾಗುತ್ತದೆ. ○

[ಸುಧೀರ ಬೇಡೆಕರ ಅವರ ಮರಾಠಿ ಲೇಖನವೊಂದನ್ನು ಆಧರಿಸಿ]

ಉದ್ಯೋಗ ಪ್ರಾಶಸ್ತ್ಯಕ್ಕಾಗಿ ಒತ್ತಾಯ

ರಾಯಚೂರಿನಲ್ಲಿ ಸ್ಥಾಪಿತಗೊಂಡಿರುವ ಥರ್ಮಲ್ ಪ್ಲ್ಯಾಂಟ್‌ಗಾಗಿ ಅದೆಷ್ಟೋ ಜನ ಭೂಮಿ ಕಳೆದುಕೊಂಡರು. ಭೂಮಿ ಕಳೆದುಕೊಂಡವರ ಮಕ್ಕಳಿಗೆ ಉದ್ಯೋಗದಲ್ಲಿ ಪ್ರಾಶಸ್ತ್ಯ ನೀಡಬೇಕೆಂದು ಒಪ್ಪಂದವಾಗಿತ್ತು. ಥರ್ಮಲ್ ಪ್ಲ್ಯಾಂಟ್‌ನ ಆಡಳಿತ ವರ್ಗ ಸ್ಥಳೀಯರಿಗೆ ಉದ್ಯೋಗ ನಿರಾಕರಿಸುತ್ತಿದ್ದಾರಷ್ಟೇ ಅಲ್ಲದೇ, ಸಾವಿರಾರು ಜನರಿಗೆ ಉದ್ಯೋಗ ಒದಗಿಸುವ ಸಾಮರ್ಥ್ಯವುಳ್ಳ ಪ್ಲಾಂಟ್‌ನಲ್ಲಿ ಅತಿಯಾದ ಯಾಂತ್ರೀಕರಣ (over automation) ಮಾಡಿ ಅನೇಕರಿಗೆ ಕೆಲಸವಿಲ್ಲದ ಹಾಗೆ ಮಾಡಿದ್ದಾರೆ.

ಆಡಳಿತ ವರ್ಗದ ಧೋರಣೆಯನ್ನು ಪ್ರತಿಭಟಿಸಿ 28-5-82 ರಂದು ಸ್ಥಳೀಯ ಡಿ. ವೈ. ಎಫ್. ಐ ಮತ್ತು ಎಸ್. ಎಫ್. ಐ. ಘಟಕದವರು ಥರ್ಮಲ್ ಪ್ಲ್ಯಾಂಟ್‌ನ ಮ್ಯಾನೇಜಿಂಗ್ ಡೈರೆಕ್ಟರರಿಗೆ ಮನವಿ ಸಲ್ಲಿಸಿದರು.

●

ಉಡುಪಿ : ವಾರ್ಷಿಕ ಮಹಾಸಭೆ

ಉಡುಪಿ ತಾಲ್ಲೂಕು ಜನರಲ್ ವರ್ಕರ್ಸ್ ಯೂನಿಯನಿನ ವಾರ್ಷಿಕ ಮಹಾ ಸಭೆಯು ತಾ|| 30-5-82 ರಂದು ಅಂಬಾಗಿಲು ಆಫೀಸಿನಲ್ಲಿ ಕಾಂ| ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಸುರೇಶ್ ಕಾಂಚನರು ಸ್ವಾಗತಿಸಿದರು. ಅಗಲಿದ ಕಾರ್ಮಿಕ ಮುಂದಾಳುಗಳಿಗೂ ಹೋರಾಟಗಳಲ್ಲಿ ಹುತಾತ್ಮರಾದವರಿಗೂ ಶ್ರದ್ಧಾಂಜಲಿ ಅರ್ಪಿಸಲು ಮೌನ ಆಚರಿಸಲಾಯಿತು.

ಕಾರ್ಯದರ್ಶಿ ಗುರುರಾಜ ಸೆಟ್ಟಿಗಾರರು ವಾರ್ಷಿಕ ವರದಿ ಮತ್ತು ಲೆಖ್ಖ ಪತ್ರವನ್ನು ಮಂಡಿಸಿದರು. ಅದರ ಮೇಲೆ ಚರ್ಚೆ ನಡೆದು ಕೆಲವು ತಿದ್ದುಪಡಿಗಳೊಂದಿಗೆ ಅಂಗೀಕರಿಸಲಾಯಿತು.

ಕಾಂ| ಸಾಧು ಅಮೀನರು ಶುಭ ಕೋರಿ ಮಾತನಾಡಿ, ಬೀಡಿ ಕಾರ್ಮಿಕರ ಜೂನ್ 15ರ ಹೋರಾಟ ಯಶಸ್ವಿಗೊಳಿಸಲು ವಿನಂತಿಸಿದರು.

ಮುಂದಿನ ಸಮಿತಿಗೆ ಅಧ್ಯಕ್ಷರಾಗಿ ಕಾಂ| ಅಬ್ರಹಾಂ ಕರ್ಕಡ, ಉಪಾಧ್ಯಕ್ಷರಾಗಿ ವಿಠಲಶೆಟ್ಟಿ, ಕಾರ್ಯದರ್ಶಿಯಾಗಿ ಡೇವಿಡ್ ಕರ್ಕಡ, ಜತೆಕಾರ್ಯದರ್ಶಿಗಳಾಗಿ ಸುಬ್ರಾಯ ನಾಯಕ್, ಸುಧಾಕರ ಕೋಟಿಯಾನ್, ಕೋಶಾಧಿಕಾರಿಯಾಗಿ ಸುರೇಶ್ ಕಾಂಚನರುಳ್ಳ 15 ಮಂದಿಯನ್ನು ಆರಿಸಲಾಯಿತು. ಕೊನೆಯಲ್ಲಿ ವಿಠಲಸೆಟ್ಟರು ಧನ್ಯವಾದ ಸಲ್ಲಿಸಿದರು.

●

ಕೇರಳ ಚುನಾವಣೆ

(3 ನೇ ಪುಟದಿಂದ)

ಒಂದನೇಯದಾಗಿ ಜನತಾದ ಹಿಂದಿನ ಜನಸಂಘದ ವಿಭಾಗವು, ಈಗ ಬಿಜೆಪಿ ಹೆಸರಿನಿಂದ ಕರೆಯಲ್ಪಟ್ಟು, ಅವರ ಮಾರ್ಕ್ಸ್‌ವಾದಿ ವಿರೋಧಿ ಕಾರ್ಯಕರ್ತರು ಹಲವಾರು ಕ್ಷೇತ್ರಗಳಲ್ಲಿ ಎಲ್. ಡಿ. ಎಫ್. ವಿಜಯ ಗಳಿಸಬಹುದೆಂದು ಕಂಡು ಬಂದಲ್ಲಿ ಯು. ಡಿ. ಎಫ್. ಅಭ್ಯರ್ಥಿಗಳಿಗೆ ಕೆಲಸ ಮಾಡಿದರೂ, ಯು.ಡಿ.ಎಫ್. ರಂಗದೊಡನೆ ಬಹಿರಂಗವಾಗಿ ಕೂಡಿಕೊಳ್ಳಲು ಸಾಧ್ಯವಾಗಲಿಲ್ಲ. ಯು.ಡಿ. ಎಫ್. ಸಾರ್ವಜನಿಕವಾಗಿ ಮತ್ತದರಲ್ಲಿ ಸೇರಿರುವ ಪಕ್ಷಗಳು ಕೂಡಾ ಬಿಜೆಪಿಯೊಡನೆ ಬಹಿರಂಗವಾಗಿ ಸೇರಿಕೊಳ್ಳಲು ಸಾಧ್ಯವಾಗಲಿಲ್ಲ. ಇದರಿಂದ ಹಿಂದೂ ರಾಷ್ಟ್ರದಂತಹ ಸೈದ್ಧಾಂತಿಕ ರಾಜಕೀಯ ನಿಲುವಿಗಳ ವಿರುದ್ಧ ಪ್ರಭಲವಾದ ಸಾಮೂಹಿಕ ರಾಜಕೀಯ ಚಳವಳಿಯನ್ನು ನಡೆಸಲು ಆಧಾರ ಸ್ಥಾಪಿಸಿದಂತಾಗಿದೆ. ಎರಡನೇಯದಾಗಿ, ಕ್ರಿಶ್ಚಿಯನರ ನಡುವೆ ಜಾತ್ಯಾತೀತ ಶಕ್ತಿಗಳು ಎದ್ದು ಬಂದಿವೆ. ಅವುಗಳಲ್ಲಿ ಒಂದು ಭಾಗವು ಎಲ್.ಡಿ.ಎಫ್.ನೊಡನೆ ಸಹಕಾರ ವಹಿಸಲು ಹಿಂದು ಮುಂದೆ ನೋಡಲಿಲ್ಲ. ಎಲ್. ಡಿ. ಎಫ್. ಗೆ ಬೆಂಬಲವನ್ನು ಹಾರೈಸಿ 73 ಕ್ರಿಶ್ಚಿಯನ್ ಪಾದ್ರಿಗಳು (ಇವರಲ್ಲಿ 12ಮಂದಿ ಕ್ಯಾಥೋಲಿಕರು) ಹೇಳಿಕೆ ಕೊಟ್ಟಿರುವುದು ಒಂದು ಸಣ್ಣ ಸಂಗತಿಯಲ್ಲ. ಹಲವರು ಎಲ್. ಡಿ ಎಫ್. ಗೆ ಪರವಾಗಿ ಬಹಿರಂಗ ನಿಲುವು ತೆಗೆದುಕೊಂಡಿರದಿದ್ದರೂ, ಯಾವ ರಂಗದವರೂ ಚರ್ಚನ್ನು ಚುನಾವಣಾ ಕಾರ್ಯಕ್ಕೆ ಕ್ಷೇತ್ರವಾಗಿ ಉಪಯೋಗಿಸುವುದನ್ನು ವಿರೋಧಿಸಿದರು. ಹಿಂದೆ ಮಾಡಿದಂತೆ, ಮೇಲ್ಮಟ್ಟದಲ್ಲಿ ಪಾದ್ರಿಗಳ ಕೂಟವು ನಾಸ್ತಿಕವಾದಿ ಕಮ್ಯುನಿಸ್ಟ್ ಶಕ್ತಿಗಳನ್ನು ಸೋಲಿಸಬೇಕೆಂದು ತಮ್ಮ ಹಿಂಬಾಲಕರಿಗೆ ಚರ್ಚ್ ಸರ್ಕ್ಯುಲರ್ ಕೊಡಲು ಮುಂದೆ ಬರಲಿಲ್ಲ. ಇದೆಲ್ಲವೂ ಕ್ರಿಶ್ಚಿಯನ್ ಜನಸಮೂಹಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಮುಂದಿನ ಕೆಲಸಕ್ಕೆ ಸಹಾಯಕವಾಗುವುದು.

ಚಳುವಳಿಯನ್ನು ಬೆಳೆಸುವುದು

ಮೂರನೆಯದಾಗಿ, 'ಕಾದಿರಿಸುವಿಕೆ'ಯ ಆಧಾರದಲ್ಲಿ ರೂಪಿಸಲ್ಪಟ್ಟ ಎನ್.ಡಿ.ಪಿ. ಮತ್ತು ಎಸ್.ಆರ್.ಪಿ. —ಅವುಗಳಲ್ಲಿ ಒಂದು ಜಾತಿ ಆಧಾರದಲ್ಲಿ, ಮತ್ತು ಇನ್ನೊಂದು ಆರ್ಥಿಕ ಆಧಾರದಲ್ಲಿ ಕಾದಿರಿಸುವಿಕೆಗಾಗಿ ಹೋರಾಡುವುದಕ್ಕಾಗಿ ರಚಿಸಿದ್ದುದ್ದು – ತಮ್ಮನ್ನು ರಕ್ಷಿಸಿಕೊಳ್ಳುವ ಸ್ಥಿತಿಗೆ ದೂಡಲ್ಪಟ್ಟವೆ. 'ಕಾದಿರಿಸುವಿಕೆಯು' ಒಂದು ಚುನಾವಣಾ ಪ್ರಶ್ನೆಯಲ್ಲವೆಂದು ಅವರು ಸಾರಬೇಕಾಗಿ ಬಂತು. ಜಾತಿಯ ಆಧಾರದ ಮತ್ತು ಆರ್ಥಿಕಆಧಾರ ದೃಷ್ಟಿಕೋನಗಳಲ್ಲಿ ಹೊಂದಾಣಿಕೆ ಮಾಡಲು ಸಾಧ್ಯವಿಲ್ಲವೆಂದಲ್ಲ ಎಂದು ಅವರು ಸಾರಬೇಕಾಗಿ ಬಂತು. ಇದರಿಂದಾಗಿ ಮುಂದುವರಿದ ಮತ್ತು ಹಿಂದುಳಿದ ಜಾತಿಗಳ ಮಧ್ಯೆ ಹಿಂದುಳಿದ ಜಾತಿಗಳಿಗೆ ರಕ್ಷಣೆಕೊಡುವ ಆಧಾರದಲ್ಲಿ ಎಲ್ಲ ಜಾತಿಗಳ ಮತ್ತು ಮತಗಳ ಸಾಮಾನ್ಯ ಜನತೆಗಳನ್ನು ಒಳಗೊಂಡು ಪ್ರಭಲವಾದ ಚಳವಳಿಯನ್ನು ನಡೆಸಲು ತಳಹದಿ ರೂಪಿಸಲ್ಪಡುವಂತಾಗಿದೆ.

ಚುನಾವಣಾ ಚಳುವಳಿಯಿಂದ ಹೊರಬಂದ ಈ ಮುಖ್ಯ ವಿಷಯಗಳ ಉಪಯೋಗವನ್ನು ಹೇಗೆ ಮತ್ತು ಯಾವರೀತಿಯಲ್ಲಿ ಮಾಡಿಕೊಳ್ಳುವುದು, ಸರಕಾರವು ಮತೀಯ ವಿಷಯಗಳಲ್ಲಿ ಮಧ್ಯ ಪ್ರವೇಶ ಮಾಡುವುದನ್ನು ವಿರೋಧಿಸುವ ಮತ್ತು ಮತಗಳು ರಾಜಕೀಯ ವಿಷಯಗಳಲ್ಲಿ ಮಧ್ಯ ಪ್ರವೇಶ ಮಾಡುವುದನ್ನು ವಿರೋಧಿಸುವ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಚಳವಳಿಯನ್ನು ಹೇಗೆ ಬೆಳೆಸಿಕೊಂಡು ಹೋಗುವುದು, ಹಿಂದುಳಿದ ಜಾತಿಗಳಿಗೂ ಮತಗಳ ನ್ಯಾಯವಾದ ಹಕ್ಕುಗಳಿಗಾಗಿ ಹೋರಾಟಗಳನ್ನು ನಡೆಸುತ್ತಿರುವಾಗಲೇ, ಎಲ್ಲಾ ಜಾತಿಗಳು ಮತ್ತು ಮತಗಳಿಗೆ ಸೇರಿದ ಜನಸಾಮಾನ್ಯರ ಸರ್ವಸಾಮಾನ್ಯ ಬೇಡಿಕೆಗಳ ಆಧಾರದಲ್ಲಿ ಒಂದು ಅಸಾಮಾನ್ಯ ಚಳವಳಿಯನ್ನು ಹೇಗೆ ಬೆಳೆಸುವುದು ಎಂಬುದರ ಬಗ್ಗೆ – ಎಲ್. ಡಿ. ಎಫ್. ನ ಎಲ್ಲಾ ಘಟಕಗಳು ಚಿಂತಿಸಬೇಕಾಗಿದೆ.

●

ಸಿ. ಐ. ಟಿ. ಯು. ವಾರ್ಷಿಕೋತ್ಸವ

ಹರಿಹರ :

ಇಲ್ಲಿನ ಮೈಸೂರು ಕಿರ್ಲೋಸ್ಕರ್ ಕಾರ್ಮಿಕ ಸಂಘ, ಹರಿಹರ ಫಾಲಿಫೈಬರ್ ಕಾರ್ಮಿಕ ಸಂಘ, ಬೀಡಿ ಕೆಲಸಗಾರರ ಸಂಘ ಮತ್ತು ರಾಣೆಬೆನ್ನೂರಿನ ನೇಕಾರರ ಸಂಘದ ಜಂಟೀ ನೇತೃತ್ವದಲ್ಲಿ 30-5-82 ರಂದು ಸಿ. ಐ. ಟಿ. ಯು. ವಿನ 13ನೇ ವಾರ್ಷಿಕೋತ್ಸವ (ಕಳೆದ ವಾರದ ಐಕ್ಯರಂಗದಲ್ಲಿ ಸಿ.ಐ.ಟಿ.ಯು. ವಿನ 12ನೇ ವಾರ್ಷಿಕೋತ್ಸವ ಎಂದು ಪ್ರಕಟವಾಗಿದ್ದೆ, ಸರಿಪಡಿಸಿಕೊಳ್ಳಬೇಕು. –ಸಂ.) ಆಚರಿಸಲಾಯಿತು. ಈ ಸಮಾರಂಭ ಆಚರಣೆಯ ಕುರಿತು ರಚಿಸಲಾದ ಸಮಿತಿಗೆ ಕಾಂ|| ಚಂದ್ರಾನಾಯಕ್ ಕನ್ವೀನರ್ ಆಗಿದ್ದರು.

ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕಿರ್ಲೋಸ್ಕರ್ ಮತ್ತು ಫಾಲಿಫೈಬರ್ ಕಾರ್ಮಿಕ ಸಂಘಗಳ ಅಧ್ಯಕ್ಷರೂ, ಸಿ. ಐ. ಟಿ. ಯು. ರಾಜ್ಯ ಕಾರ್ಯದರ್ಶಿಗಳೂ ಆದ ಕಾಂ|| ವಿ.ಜೆ.ಕೆ. ನಾಯರ್ ಮತ್ತು ರಾಜ್ಯ ಸಿ.ಐ.ಟಿ.ಯು.ಉಪಾಧ್ಯಕ್ಷರಾದ ಕಾಂ| ಎನ್. ಕೆ. ಉಪಾಧ್ಯಾಯ ಅವರು ಆಗಮಿಸಿದ್ದರು.

ನೆರೆದಿದ್ದ ಸಹಸ್ರಾರು ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಕಾಂ|| ಎಲ್. ಕೆ. ಯವರು ರಾಷ್ಟ್ರೀಯ–ಅಂತರಾಷ್ಟ್ರೀಯ ಪರಿಸ್ಥಿತಿಯನ್ನು ವಿವರಿಸಿದರು.

ಇತ್ತೀಚಿನ ಚುನಾವಣೆಯಲ್ಲಿ ಪ. ಬಂಗಾಳದಲ್ಲಿ ಭಾರೀ ಬಹುಮತದಿಂದ ಎಡರಂಗವು ಅಧಿಕಾರಕ್ಕೆ ಬಂದಿರುವ ಕುರಿತು ಹರ್ಷ ವ್ಯಕ್ತಪಡಿಸಿದ ಕಾಂ|| ಎನ್. ಕೆ. ಯವರು ಪ. ಬಂಗಾಲ ಜನತೆಯನ್ನು ಅಭಿನಂದಿಸಿದರು.

ನಂತರ ಕಾಂ|| ವಿ.ಜೆ.ಕೆ. ನಾಯರ್ ಮಾತನಾಡುತ್ತಾ ಸಿ.ಐ.ಟಿ.ಯು. ಧ್ಯೇಯೋದ್ದೇಶಗಳನ್ನು ವಿವರಿಸಿದರು. ಮೈಸೂರು ಕಿರ್ಲೋಸ್ಕರ್ ಕಾರ್ಮಿಕರ ಸಂಘ ಕಾಂ|| ಎನ್. ಎಲ್. ಉಪಾಧ್ಯಾಯ ಮತ್ತಿತರರ ನೇತೃತ್ವದಲ್ಲಿ 1942ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಉದ್ದಿಮೆಯಲ್ಲಿ ಅಸ್ತಿತ್ವದಲ್ಲಿರುವ ಏಕಮೇವ ಸಂಘಟನೆಯಾಗಿದ್ದು, ಇತ್ತೀಚಿಗೆ ಕೆಲವೇ ಕೆಲವು ಮತೀಯವಾದಿಗಳು ಬಿ.ಎಂ.ಎಸ್. ನೇತೃತ್ವದ ಸಂಘ ಪ್ರಾರಂಭಿಸಿರುವುದಕ್ಕೆ ಕಳವಳ ವ್ಯಕ್ತಪಡಿಸಿ, ಕಾರ್ಮಿಕರ ಐಕ್ಯತೆಯನ್ನು ಒಡೆಯುವ ಯತ್ನಗಳನ್ನು ತ್ರೀವ್ರವಾಗಿ ಖಂಡಿಸಿದರು.

ಕಾರ್ಮಿಕರ ಮನದಲ್ಲಿ ವಿಷಬೀಜ ನೆಡಲು ಯತ್ನಿಸುತ್ತಿರುವ ಆರ್. ಎಸ್. ಎಸ್. ನವರ ಪ್ರಯತ್ನಗಳನ್ನು ಕಾಂ|| ವಿ. ಜೆ. ಕೆ. ಟೀಕಿಸಿ, ಆರ್. ಎಸ್. ಎಸ್.ನ ನಿಜರೂಪವನ್ನು ಬಯಲು ಮಾಡಿದರು. ಪಾಕಿಸ್ತಾನವನ್ನು ದಿನ ಬೆಳಗಾದರೆ ದೂರುವ ಆರ್. ಎಸ್. ಎಸ್.ನವರು, ಅಮೇರಿಕವು ಪಾಕೀಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜು ಮಾಡಿದ್ದನ್ನು ಖಂಡಿಸಿಲ್ಲ; ತಾರಾಪುರ ರಿಯಾಕ್ಟರಗೆ ಯುರೇನಿಯಂ ಕೊಡಲು ನಿರಾಕರಿಸಿದ ಅಮೇರಿಕವನ್ನು ಖಂಡಿಸಿಲ್ಲ ಎಂದು ದೂರಿದ ಕಾಂ| ವಿ.ಜೆ.ಕೆ, ಆರ್. ಎಸ್. ಎಸ್. ಅಮೇರಿಕಾದ ಸಾಮ್ರಾಜ್ಯಶಾಹಿ ಕೈಗೊಂಬೆ ಎಂದು ಆಪಾದಿಸಿದರು.

ಸಾರ್ವಜನಿಕ ವಿತರಣಾ ವ್ಯವಸ್ಥೆ ಮತ್ತು ಸಗಟುವ್ಯಾಪಾರವನ್ನು ರಾಷ್ಟ್ರೀಕರಿಸಬೇಕು ಎಂದು ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು ಒತ್ತಾಯಿಸುತ್ತಿದ್ದರೂ ಬಿ. ಎಂ. ಎಸ್. ಇದನ್ನು ವಿರೋಧಿಸುತ್ತಿದೆ ಎಂದು ತಿಳಿಸಿದ ಕಾಂ|| ವಿ.ಜೆ.ಕೆ., ಬಿ. ಎಂ. ಎಸ್. ಕುರಿತು ಜಾಗ್ರತರಾಗಿರಬೇಕೆಂದು ಮನವಿ ಮಾಡಿದರು.

ಇದೇ ತಿಂಗಳಲ್ಲಿ ಮೈಸೂರು ಕಿರ್ಲೋಸ್ಕರ್ ಯೂನಿಯನ್ನಿನ ಕೇಂದ್ರ ಸಮಿತಿಗೆ ನಡೆಯಲಿರುವ ಚುನಾವಣೆಗಳಲ್ಲಿ ಬಿ.ಎಂ.ಎಸ್. ಸ್ಪರ್ಧಿಸಿ ಗೆದ್ದು ತಮಗೆ ಜನ ಬೆಂಬಲವಿರುವುದನ್ನು ಸಾಬೀತು ಪಡಿಸಲಿ ಎಂದು ಸವಾಲೆಸೆದ ಕಾಂ| ವಿ.ಜೆ.ಕೆ., ಮಾರ್ಕ್ಸ್‌ವಾದಿಗಳನ್ನು ಹರಿಹರದಿಂದ ಓಡಿಸಲು ನಾವು ಕಾಂಗ್ರೆಸ್ ಮತ್ತು ಸಿ. ಪಿ. ಐ. ಗಳಿಗೆ ಬೆಂಬಲ ನೀಡುತ್ತೇವೆಂದು ಬಿ. ಜೆ. ಪಿ. ಧುರೀಣ ದುಗೋಜಿ ಗೋವಿಂದರಾವ್ ಘೋಷಿಸಿರುವುದನ್ನು ಉಗ್ರವಾಗಿ ಖಂಡಿಸಿದರು.

○

ಅರೆಶಿರೂರಿನಲ್ಲಿ ರೈತರ ಸಂಘ

10-5-82 ರಂದು ದ. ಕ. ಜಿಲ್ಲೆಯ ಅರೆಶಿರೂರಿನಲ್ಲಿ ರೈತರು, ಕೃಷಿ ಕೂಲಿಕಾರರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ| ಅಬ್ರಹಾಂ ಕರ್ಕಡ ವಹಿಸಿದ್ದರು

ಹೊಸದಾಗಿ ಪ್ರಾರಂಭವಾದ ರೈತ ಸಂಘದ ಘಟಕಕ್ಕೆ ಅಧ್ಯಕ್ಷರಾಗಿ ಜಿಡ್ಡು ನಾಯ್ಕ, ಉಪಾಧ್ಯಕ್ಷರಾಗಿ ಪುಟ್ಟ ಗೌಡ, ಕಾರ್ಯದರ್ಶಿಯಾಗಿ ಮಂಜು ನಾಯ್ಕ, ಜಾರ್ಜರನ್ನು ಜೊತೆ ಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಲಾಯಿತು.

ಕೊನೆಯಲ್ಲಿ ಪಿ. ಪಿ. ಜಾರ್ಜ ಅವರು ವಂದಿಸಿದರು.

○

.ಬೆಂಗಳೂರು :

ಠಾಣೆಯಲ್ಲಿ ಕಾರ್ಮಿಕರಿಗೆ ಚಿತ್ರಹಿಂಸೆ

ಬೆಂಗಳೂರಿನ ವೈಟ್‌ಫೀಲ್ಡ್ ವಿಭಾಗದಲ್ಲಿ ಆಂಧ್ರ ಆ್ಯಂಡ್ ಸದರನ್ ಸ್ಟೀಲ್ ಅಲಾಯ್ಸ್ ಲಿಮಿಟೆಡ್‌ನ ಹೋರಾಟ ನಿರತ ಕಾರ್ಮಿಕರನ್ನು ಮಹದೇವಪುರ ಪೋಲಿಸ್ ಠಾಣೆಗೆ ಎಳೆದೊಯ್ದು ಚಿತ್ರಹಿಂಸೆಗೀಡುಮಾಡಿದ ಘಟನೆ ವರದಿಯಾಗಿದೆ. ಈ ಕಾರ್ಖಾನೆಯ 500 ಕಾರ್ಮಿಕರು ಕಾಯ್ದೆಬಾಹಿರ ಲೇ ಆಫ್, ಡಿಸ್‌ಮಿಸ್‌ಗಳ ವಿರುದ್ಧ ಕಳೆದ ಮಾರ್ಚ್‌ನಿಂದ ಹೋರಾಟ ನಡೆಸಿದ್ದಾರೆ. (ಹೋರಾಟದ ಪೂರ್ತಿ ವಿವರ ಐಕ್ಯರಂಗದಲ್ಲಿ ಈಗಾಗಲೇ ಪ್ರಕಟವಾಗಿದೆ.)

25.5-82 ರಂದು ಸಂಘದ ಸಕ್ರೀಯ ಸದಸ್ಯರಾದ ಅಶೋಕ ಮಲ್ಲಿಕ್, ಪ್ರತಾಪ ಶಿಂಗಾಡೆ ಮತ್ತು ಶಿವಾಜಿ ಶಿಂಗಾಡೆ ಎಂಬೀ ಮೂವರನ್ನು ಠಾಣೆಗೆ ಎಳೆದೊಯ್ದು ಅಮಾನುಷವಾಗಿ ಥಳಿಸಿದ್ದಾಗಿ ತಿಳಿದು ಬಂದಿದೆ. ಅವರ ಉಗುರುಗಳಿಗೆ ಸೂಜಿ ಚುಚ್ಚಲಾಗಿದೆ. ಒಬ್ಬನು ಕಿವಿಗೆ ಬಿದ್ದ ಏಟಿನಿಂದಾಗಿ ಕಿವುಡನಾಗಿಬಿಟ್ಟಿದ್ದಾನೆ. ಮೈತುಂಬ ಬರೆ ಮೂಡುವಂತೆ ಮೂವರನ್ನೂ ಥಳಿಸಲಾಗಿದೆ.

ಇಷ್ಟು ಸಾಲದೆಂಬಂತೆ ಈ ಸೈತಾನರು ಕಾರ್ಖಾನೆಯ ವರ್ಕ್ಸ್ ಮ್ಯಾನೇಜರನಾದ ಸೋಮಶೇಖರಪ್ಪ ಎಂಬುವನನ್ನು ಕರೆ ಕಳುಹಿಸಿ ಅವನ ಎದುರಿನಲ್ಲಿ ಮತ್ತೊಮ್ಮೆ ದೃಶ್ಯದ ಪುನರಾವರ್ತನೆ ಮಾಡಲಾಯಿತು. ಇಡೀ ಈ ಕಾರ್ಯಾಚರಣೆಯ ನೇತೃತ್ವವನ್ನು ಮಾನವ ರೂಪದ ರಾಕ್ಷಸ ಅಲ್ಲಿನ ಸಬ್ ಇನ್‌ಸ್ಪೆಕ್ಟರನಾದ ಚಂದ್ರಶೇಖರಯ್ಯ ಎಂಬುವನು ವಹಿಸಿದ್ದನು.

ಈ ಬಡಪಾಯಿಗಳು ಮಾಡಿದ ತಪ್ಪೇನು ಗೊತ್ತೇ ? ಸಿ.ಐ.ಟಿ.ಯು. ನೇತೃತ್ವದಲ್ಲಿ ಸಂಘ ರಚಿಸಿದ್ದು.

ಪೋಲಿಸರ ಅಮಾನುಷ ದೌರ್ಜನ್ಯ ಪ್ರತಿಭಟಿಸಿ ಜೂನ್ 3 ರಂದು ಠಾಣೆಯ ಸಮೀಪದಲ್ಲೇ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಸಭೆಯನ್ನುದ್ದೇಶಿಸಿ ಕಾಂ| ಸೂರ್ಯನಾರಾಯಣರಾವ್, ಟಿ. ಎಸ್. ಅನಂತರಾಮ್, ಜಾನ್ ವಿನ್ಸೆಂಟ್, ಫಿಲಿಪ್ ನರೋನಾ ಮತ್ತು ಕಾಂ| ಜಗನ್ನಾಥ ಮಾತನಾಡಿ ಸಬ್ ಇನ್‌ಸ್ಪೆಕ್ಟರ್ ಚಂದ್ರಶೇಖರಯ್ಯನ ದುಂಡಾವರ್ತನೆಯನ್ನು ತೀವ್ರವಾಗಿ ಖಂಡಿಸಿದರು. ಮಾಲೀಕರ ಎಂಜಲು ಕಾಸಿನ ಆಸೆಗಾಗಿ ಕಾರ್ಮಿಕರನ್ನು ತೊಂದರೆ ಮಾಡುತ್ತಿರುವ ಠಾಣೆಯ ಸಿಬ್ಬಂದಿಯನ್ನು ಸಸ್ಪೆಂಡ್ ಮಾಡುವಂತೆ ಸರಕಾರಕ್ಕೆ ಒತ್ತಾಯಿಸಲಾಯಿತು.

○

ಶಹಾಬಾದ ಎ. ವಿ. ಬಿ. ಕಾರ್ಮಿಕರ ಹೋರಾಟ

ವೇತನ ಪುನರ್ವಿಮರ್ಶೆ, ತುಟ್ಟಿ ಭತ್ತೆಯಲ್ಲಿ ಹೆಚ್ಚಳ ಮೊದಲಾದ ಬೇಡಿಕೆಗಳ ಸಲುವಾಗಿ ಶಹಾಬಾದಿನ ಎ. ವಿ. ಬಿ. ನೌಕರರೆಲ್ಲ ಮಾರ್ಚ್ ತಿಂಗಳಲ್ಲೇ ತಮ್ಮ ಬೇಡಿಕೆಗಳನ್ನು ಸಲ್ಲಿಸಿದ್ದು. ಸಿ. ಐ ಟಿ ಯು. ಯೂನಿಯನ್ನಿನ ಜೊತೆಯಲ್ಲಿ ಚರ್ಚಿಸಲು ಮಾಲೀಕರು ತಯಾರಿಲ್ಲದರಿಂದ ಜೂನ್ 3 ರಿಂದ ಉಪವಾಸ ಸತ್ಯಾಗ್ರಹ ಪ್ರಾರಂಭಿಸಲಾಗಿದೆ. ಪ್ರತಿ ದಿವಸ 12 ರಂತೆ ಒಂದೊಂದು ಖಾತೆಯ ಕಾರ್ಮಿಕರು ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತಿದ್ದಾರೆ. ಸರಕಾರ ಮತ್ತು ಮಾಲೀಕರಿಂದ ಮಾನ್ಯತೆ ಪಡೆದ ಐ. ಟಿ. ಐ. ಟ್ರೇಸೀ ಮತ್ತು ಜನರಲ್ ವರ್ಕರ್ಸ್ ಯೂನಿಯನ್ 1979ರಲ್ಲಿ ಗುಪ್ತ ಮತದಾನದ ಮೂಲಕ ಮಾನ್ಯತೆ ಪಡೆದಿದ್ದು ಅದರ ಜೊತೆಯಲ್ಲೇ ಒಪ್ಪಂದಮಾಡಿಕೊಳ್ಳುವುದಾಗಿ ಮಾಲೀಕರು ಹೇಳುತ್ತಿದ್ದಾರೆ. ಅಂದಿನ ಮತದಾನದಲ್ಲಿ ತಾವೂ ಐ ಟಿ ಐ ಯೂನಿಯನ್ನಿಗೆ ಬೆಂಬಲಕೊಟ್ಟೆದ್ದು ಆ ಯೂನಿಯನ್ ಮುಖಂಡರು ಕಾರ್ಮಿಕರನ್ನು ಕಡೆಗಣಿಸಿದ್ದರಿಂದ 1981 ಫೆಬ್ರವರಿಯಲ್ಲಿ ಸಿ ಐ ಟಿ ಯು ಯೂನಿಯನ್ ಸ್ಥಾಪಿಸಿದ್ದು ಬಹುಸಂಖ್ಯಾ ಕಾರ್ಮಿಕರು, ನೌಕರರೆಲ್ಲಾ ಸಿ ಐ ಟಿ ಯು ಯೂನಿಯನ್‌ಗೆ ಬೆಂಬಲ ತೋರಿಸಿದ್ದಾರೆ. ಅನ್ನಸತ್ಯಾಗ್ರಹದಲ್ಲಿ ಮೇಲ್ದರ್ಜೆಯ ನೌಕರರರೂ ಪಾಲ್ಗೊಳ್ಳುತ್ತಿದ್ದಾರೆ. ಹೆಚ್ಚಿನ ಉತ್ಸಾಹ ತೋರ್ಪಡಿಸುತ್ತಿದ್ದಾರೆ. ಕೊನೆಯ ವರೆಗೂ ಹೋರಾಡುವ ನಿರ್ಧಾರಮಾಡಿದ್ದಾರೆ.

ಸಿ ಐ ಟಿ ಯು ಉಪಾಧ್ಯಕ್ಷರಾದ ಎನ್. ಕೆ. ಉಪಾಧ್ಯಾಯ, ಯೂನಿಯನ್ ಅಧ್ಯಕ್ಷ ಮಹಮದ್ ಹಸನ್ ಖಾನ್, ರೈತ ಸಂಘದ ಕಾರ್ಯದರ್ಶಿ ಕಲ್ಲಪ್ಪ ಕಿರಣಗಿ ಹಾಗೂ ಯೂನಿಯನ್ ಕಾರ್ಯದರ್ಶಿ ಪುಷ್ಪರಾಜ, ದಾಸ, ಮೋಹನ, ಮೂರ್ತಿ ಮೊದಲಾದವರೆಲ್ಲ ಹಲವಾರು ಗೇಟ್ ಮೀಟಿಂಗ್ ಮಾಡಿ, ಕಾರ್ಮಿಕರು ಐಕ್ಯತೆಯಿಂದ ಹೋರಾಟ ಮುಂದುವರಿಸಬೇಕೆಂದು ಕರೆಕೊಟ್ಟರು. ಹೋರಾಟ ಮುಂದುವರಿಯುತ್ತಿದೆ. ತಾ|| 9 ರಂದು ಕಾಂ| ಮಹಮದ್ ಹಸನ್ ಖಾನ್, ವಿ.ಜೆ.ಕೆ. ನಾಯರ್ ಮತ್ತು ಎನ್. ಕೆ. ಉಪಾಧ್ಯಾಯರು ಲೇಬರ್ ಕಮೀಷನರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ಸಮಸ್ಯೆ ಕುರಿತು ಚರ್ಚಿಸಿದಾಗ ತಾ|| 18-6-82 ರಂದು ಎಲ್ಲ ಯೂನಿಯನ್ನಿನ ಮತ್ತು ಮಾಲೀಕರ ಜಂಟೀ ಸಭೆ ಕರೆದು ಪರಿಹಾರ ಕಂಡುಹಿಡಿಯುವುದಾಗಿ ಆಶ್ವಾಸನೆ ಕೊಟ್ಟಿದ್ದಾರೆ.

●

ಬಿಣಗಾ :

ಬೇಡಿಕೆ ಪತ್ರ ಸಲ್ಲಿಕೆ

ಬಿಣಗಾದ ಕಾಸ್ಟಿಕ್ ಸೋಡಾ ಕಾರ್ಖಾನೆಯು ಉತ್ತರ ಕರ್ನಾಟಕದಲ್ಲಿಯೇ ಭಾರೀ ಉದ್ದಿಮೆಯೆಂದೆನಿಸಿದೆ. ಇಲ್ಲಿ ಕಾಸ್ಟಿಕ್ ಸೋಡಾ, ಕ್ಲೋರಿನ್ ರಂಜಕಾಮ್ಲ, ಹೈಡ್ರೋಕ್ಲೋರಿಕ್ ಆಮ್ಲ ಇತ್ಯಾದಿಗಳನ್ನು ಉತ್ಪಾದಿಸಲಾಗುತ್ತದೆ. 1975 ರಲ್ಲೇ ಉತ್ಪಾದನೆ ಆರಂಭವಾಗಿದ್ದರೂ ಕಾರ್ಮಿಕರ ವೇತನ ತುಂಬಾ ಕೆಳಮಟ್ಟದಲ್ಲಿದೆ. ಇನ್ನೂವರೆಗೂ ಬೆಲೆ ಸೂಚ್ಯಂಕ ಆದರಿಸಿ ತುಟ್ಟಿಭತ್ಯ ದೊರೆಯುತ್ತಿಲ್ಲ. ಬಿಣಗಾದಂಥ ಚಿಕ್ಕ ಊರಲ್ಲಿ ಮನೆ ಸಿಗುವುದು ತುಂಬ ಕಷ್ಟವೆಂದು ಗೊತ್ತಿದ್ದೂ ಆಡಳಿತ ವರ್ಗ ಈ ಸಮಸ್ಯೆಯ ಬಗ್ಗೆ ಕಿಂಚಿತ್ತು ಗಮನಹರಿಸಿಲ್ಲ. ಅಧಿಕಾರಿಕಾರಿಗಳಿಗೆ ಮಾತ್ರ ಸುಸಜ್ಜಿತ ಮನೆ ಕಟ್ಟುವುದು ದಿನೇ ದಿನೇ ನಡದೇ ಇದೆ. ಅಧಿಕಾರಿಗಳ ಮನೆಗಳನ್ನು ಆಧುನೀಕರಣಗೊಳಿಸಲು ಲಕ್ಷಾಂತರ ರೂ, ಹಣ ವೆಚ್ಚಮಾಡಲಾಗುತ್ತಿದೆ.

ಆದರೆ ಕಾರ್ಖಾನೆಯ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿಯುತ್ತಿರುವ ಕಾರ್ಮಿಕರ ಏಳಿಗೆ ಕುರಿತು ಯಾವುದೇ ಪ್ರಯತ್ನನಡೆದಿಲ್ಲ ಕಾರ್ಖಾನೆಯಲ್ಲಿ ಕಾಂ|| ಸ್ಥಳೀಕರ ನೇತ್ರತ್ವದ ಸಿ. ಐ. ಟಿ. ಯು ಸಂಘಟನೆ ಅಸ್ತಿತ್ವದಲ್ಲಿ ಬಂದಂದಿನಿಂದ ಸ್ವಲ್ಪಾದರೂ ಬೇಡಿಕೆಗಳನ್ನು ಪಡೆಯಲು ಸಾಧ್ಯವಾಗಿದೆ.

1-5-82 ರಂದು ಸರ್ವಸದಸ್ಯರಸಭೆ ನಡೆದು ಬೆಲೆಸೂಚ್ಯಂಕ ಆಧರಿಸಿ ತುಟ್ಟಿಭತ್ಯ, ವೇತನ ಪರಿಷ್ಕರಣ ಮೊದಲಾದ ಬೇಡಿಕೆಗಳನ್ನು ಆಡಳಿತವರ್ಗಕ್ಕೆ ಸಲ್ಲಿಸಲಾಗಿದೆ. ತಮ್ಮ ಸಂಘಟನೆಯ ಕುರಿತು ವಿಶ್ವಾಸದಿಂದಿರುವ ಕಾರ್ಮಿಕರು ಬೇಡಿಕೆಗಳನ್ನು ದೊರೆಕಿಸಿಕೊಳ್ಳುವ ಯತ್ನದಲ್ಲಿದ್ದಾರೆ. ಈ ಕುರಿತು ಮಾತುಕತೆ ಆರಂಭವಾಗುವುದರಲ್ಲಿದೆ.

●

ದಿಮಿತ್ರೋವ್ ಅವರ ಜನ್ಮ ಶತಾಬ್ಧಿ ಆಚರಿಸಲು ಪಾಲಿಟ್‌ಬ್ಯೂರೋ ಕರೆ

(1ನೇ ಪುಟದಿಂದ)

ಖಂಡಿಸಿದರು. ಕಮ್ಯೂನಿಸಮಿನ ವಿಜಯವನ್ನು ಎತ್ತಿ ಹಿಡಿದರು.

"ಚರಿತ್ರೆಯ ಚಕ್ರ ತಿರುಗುತ್ತಿದೆ.... ಜೈಲು ವಾಸವಾಗಲೀ ಮರಣ ದಂಡನೆಯಾಗಲೀ ಅದನ್ನು ತಡೆಯಲು ಸಾಧ್ಯವಿಲ್ಲ. ಅದು ತಿರುಗುತ್ತಾ ಇದೆ, ಕಮ್ಯುನಿಸಮಿನ ಅಂತಿಮ ವಿಜಯಕ್ಕಾಗಿ ಅದು ತಿರುಗುತ್ತಿದೆ." ಎಂಬ ಅವರ ಶಬ್ದಗಳು ಇಂದಿಗೂ ನಿನಾದಿಸುತ್ತಿವೆ. ಇವರು ಅಪರಾಧಿ ಅಲ್ಲವೆಂಬ ನಿರ್ಣಯವನ್ನು ನಾಝಿ ಕೋರ್ಟು ತಿಳಿಸಿದಾಗಲೂ ಕೂಡ ಮುಂದೆ 2 ತಿಂಗಳವರೆಗೆ ಇವರ ಬಿಡುಗಡೆಯಾಗಲಿಲ್ಲ. ಯಾಕೆಂದರೆ ಬಲ್ಗೇರಿಯದ ನಾಗರೀಕತ್ವ ಕೊಟ್ಟ ನಂತರ, ಇವರು ಮಾಸ್ಕೋವಿಗೆ ಹೋಗಿ ಕಮ್ಯುನಿಸ್ಟ್ ಇಂಟರ್ ನಾಷನಲಿಸಂ ಕೆಲಸ ಪ್ರಾರಂಭಿಸಿದರು.

1935ರಲ್ಲಿ ದಿಮಿತ್ರೋವ್ ಇವರ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ಲಿಗೆ ಒಂದು ಮುಖ್ಯ ವರದಿಯನ್ನು ಸಲ್ಲಿಸಿದರು. ಮಾರ್ಕ್ಸ್‌ವಾದಿ-ಲೆನಿನ್‌ವಾದೀ ದೃಷ್ಟಿಕೋನದಲ್ಲಿ ಫ್ಯಾಸಿಸಂನ ವಿವರಣೆ ಮತ್ತು ಯುದ್ಧದ ಭೀತಿಯನ್ನು ವರದಿಯಲ್ಲಿ ಚೆನ್ನಾಗಿ ಸಮರ್ಥಿಸಲಾಗಿತ್ತು. ಬಂಡವಾಳಶಾಹಿ ಪದ್ಧತಿಯ ಪ್ರಭಾವದ ಇಳಿತ ಫ್ಯಾಸಿಸಮಿನ ಶಕ್ತಿಯನ್ನು ಕಡಿಮೆ ಮಾಡಿದರೂ, ಒಂದು ಕ್ರಾಂತಿಕಾರಿ ಚಳುವಳಿಯಿಂದ ಮಾತ್ರ ಅದನ್ನು ಕಿತ್ತೊಗೆಯಲು ಸಾಧ್ಯವೆಂದು ಅವರು ಸ್ಪಷ್ಟ ಹೇಳಿದ್ದಾರೆ. ಪ್ರತಿಯೊಂದು ಕಾರ್ಖಾನೆಯಲ್ಲಿ, ಪ್ರದೇಶದಲ್ಲಿ, ಜಿಲ್ಲೆಯಲ್ಲಿ ಹಾಗೂ ಪ್ರತಿಯೊಂದು ರಾಷ್ಟ್ರದಲ್ಲಿ ಮತ್ತು ಜಗತ್ತಿನಲ್ಲಿ ಕಾರ್ಮಿಕರ ಐಕ್ಯ ಕಾರ್ಯಾಚರಣೆ, ರಾಷ್ಟ್ರೀಯ ಅಂತರಾಷ್ಟ್ರೀಯವಾಗಿಯೂ ಈ ರೀತಿಯ ಕಾರ್ಮಿಕರ ಐಕ್ಯರಂಗದಿಂದ ಮಾತ್ರ, ವಿಶಾಲವಾದ ಫ್ಯಾಸಿಸ್ಟ್ ವಿರೋಧಿರಂಗದಿಂದಲೇ ಫ್ಯಾಸಿಸಂನ್ನು ಸೋಲಿಸಲು ಸಾಧ್ಯವೆಂದು, ಮಾರ್ಕ್ಸ್‌ವಾದದ ಕಾರ್ಯಕ್ರಮ, ತಂತ್ರ ಮತ್ತು ಗುರಿಯನ್ನು ತಮ್ಮ ವರದಿಯಲ್ಲಿ ವಿವರಿಸಿದ್ದರು, ಎಡಪಂಥ ಮತ್ತು ಬಲಪಂಥೀಯವಾದದ ಕುರಿತೂ ಅವರು ಎಚ್ಚರ ನೀಡಿದ್ದರು. 1943ರಲ್ಲಿ ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್ ವಿಸರ್ಜನೆಗೊಳ್ಳುವ ತನಕ ದಿಮಿತ್ರೋ ಅವರು ಅದರ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು.

ಅಮೇರಿಕದ ಸಾಮ್ರಾಜ್ಯಶಾಹಿಯ ...ನ ಯುದ್ಧ ಚಟುವಟಿಕೆಯಿಂದಾಗಿ ...ಕೀ ಜಗತ್ತೇ ಅಣು ಯುದ್ಧದ ಭಯವನ್ನೆದುರಿಸುತ್ತಿರುವಾಗ, ಫ್ಯಾಸಿಸಂ ಮತ್ತು ಯುದ್ಧದ ವಿರುದ್ಧ ಅನುಭವಗಳನ್ನು ನೆನಸಿಕೊಳ್ಳಲು ಕಮ್ಯುನಿಸ್ಟ್ ಇಂಟರ್ ನ್ಯಾಷನಲಿನ 7ನೇ ಕಾಂಗ್ರೆಸ್ಸಿನ ವರದಿಯನ್ನು ಪುನಃ ಓದುವುದು ಅತ್ಯಗತ್ಯ. ಫ್ಯಾಸಿಸ್ಟ್ ವಿರೋಧಿ ಯುದ್ಧದಲ್ಲಿ ದಿಮಿತ್ರೋವ್ ಇವರು ಫಾದರ್‌ಲ್ಯಾಂಡ್ ಫ್ರೆಂಟ್ ರಚಿಸುವಲ್ಲಿ ಸಶಸ್ತ್ರ ಯುದ್ಧ ನಡೆಸುವಲ್ಲಿ, ಬಲ್ಗೇರಿಯದ ಕಮ್ಯುನಿಸ್ಟರಿಗೆ ಮಾರ್ಗದರ್ಶನ ಮಾಡಿದರು. ಯುದ್ಧದ ನಂತರ ಇವರು ಬಲ್ಗೇರಿಯಕ್ಕೆ ಹಿಂತಿರುಗಿ, ಸರಕಾರದ ಮತ್ತು ಪಾರ್ಟಿಯ ನೇತೃತ್ವವಹಿಸಿ ಸಮತಾವಾದ ಸ್ಥಾಪನೆಗಾಗಿ ಕ್ರಮ ಕೈಗೊಂಡರು.

ಜುಲೈ 2, 1949 ರಂದು ಜೊರ್ಜಿ ದಿಮಿತ್ರೋವ್ ಇವರು ಮೃತರಾದರು.

ಸಾಮ್ರಾಜ್ಯಶಾಹಿ ವಿರೋಧ ಹೋರಾಟದಲ್ಲಿ ದಿಮಿತ್ರೋರವರ ಜೀವನ ಚರಿತ್ರೆಯ ಅನುಭವಗಳನ್ನು ಉಪಯೋಗಿಸೋಣ.

●

ಕಾರ್ಮಿಕರು ಪುನಃ ಹೋರಾಟದ ಪಥದಲ್ಲಿ

(1 ನೇ ಪುಟದಿಂದ)

ಸ್ವಿಗೊಳಿಸಲು ಸಲಹೆ, ಸೂಚನೆ ನೀಡಿದರು.

13-6-82 ರಂದು ಪಿಕೆಟಿಂಗ್ ಮತ್ತು 16-6-82 ರಂದು ಪ್ರಾವಿಡೆಂಟ್ ಫಂಡ್ ಕಮಿಷನರರ ಕಚೇರಿಯ ಮುಂದೆ ನಡೆಯಲಿರುವ ಅನ್ನ ಸತ್ಯಾಗ್ರಹ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ತೀರ್ಮಾನಿಸಲಾಯಿತು.

ಪಿ. ರಾಮಚಂದ್ರರಾವ್ ಅವರು ಅಧ್ಯಕ್ಷರಾಗಿ, ಕೆ. ಶಂಕರ ಉಪಾಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಯು. ಬಿ. ಲೋಕಯ್ಯ ಜೊತೆ ಕಾರ್ಯದರ್ಶಿಯಾಗಿ ಬಾಲಕೃಷ್ಣ ಶೆಟ್ಟಿ, ಪೂವಪ್ಪ ಸಾಲಿಯಾನ್ ಕೋಶಾಧಿಕಾರಿಯಾಗಿಯೂ ಇರುವ 34 ಮಂದಿಯ ಜಿಲ್ಲಾ ಫೆಡರೇಷನನ್ನು ರಚಿಸಲಾಯಿತು.

ಆರಂಭದಲ್ಲಿ ಕಾಂ| ಯು. ಬಿ ಲೋಕಯ್ಯ ಸ್ವಾಗತಿಸಿದರು.

●

ಗಮನಿಸಿ

ಮೇ ವಿಶೇಷಾಂಕ (30-5-82)ದ ಮುಖಪುಟದಲ್ಲಿ ರಾಷ್ಟ್ರೀಯ ಸಮಾವೇಶವು ಜುಲೈ 4 ಎಂದಿದೆ. ಇದನ್ನು ಜೂನ್ 4 ಎಂದು ತಿದ್ದಿಕೊಳ್ಳಬೇಕು. ಅಚಾತುರ್ಯಕ್ಕೆ ವಿಷಾಧಿಸುತ್ತೇವೆ.

ಡಿ.ವೈ.ಎಫ್.ಐ. ಸರ್ವ ಸದಸ್ಯರ ಸಭೆ

6-6-82 ರಂದು ಬಂಗಾರಪೇಟೆ [ಕೋಲಾರ ಜಿಲ್ಲೆ] ಯಲ್ಲಿ ಡಿ. ವೈ. ಎಫ್. ಐ. ಘಟಕದ ಸರ್ವಸದಸ್ಯರ ಸಭೆ ನಡೆಯಿತು. ಅಧ್ಯಕ್ಷತೆಯನ್ನು ವಿ. ಸುಬ್ರಮಣಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ|| ಜಿ. ವಿ. ಶ್ರೀರಾಮ ರೆಡ್ಡಿಯವರು ಆಗಮಿಸಿದ್ದರು.

ಆರಂಭದಲ್ಲಿ ಸಂಚಾಲಕ ಶ್ರೀನಿವಾಸ ಅವರು ಸಭೆಗೆ ಚಟುವಟಿಕೆ ವರದಿ ಸಲ್ಲಿಸಿದರು. ಚರ್ಚೆಯ ನಂತರ ವರದಿಯನ್ನು ಅಂಗೀಕರಿಸಲಾಯಿತು.

1982-83ನೇ ಸಾಲಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಡಿ. ಕೆ. ಅನುರಾಧಮೂರ್ತಿ, ಉಪಾಧ್ಯಕ್ಷರಾಗಿ ಎಲ್.ಎಸ್.ವೆಂಕಟೇಶ ಮತ್ತು ಬಿ. ಕೆ. ನಂದೀಶ್, ಕಾರ್ಯದರ್ಶಿಯಾಗಿ ಪಿ. ಶ್ರೀನಿವಾಸ್, ಜಂಟಿ ಕಾರ್ಯದರ್ಶಿಗಳಾಗಿ ಪರಮಶಿವಮೂರ್ತಿ ಮತ್ತು ಎಂ. ಶ್ರೀಧರ, ಖಜಾಂಚಿಯಾಗಿ ವಿ. ಸುಬ್ರಮಣಿ ಹಾಗೂ 15 ಜನ ಕಾರ್ಯಕಾರಿ ಸಮಿತಿ ಸದಸ್ಯರನ್ನೂ ಚುನಾಯಿಸಲಾಯಿತು.

ಸಭೆಯಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು : ಸೀಮೆ ಎಣ್ಣೆ ವಿತರಣೆಯಲ್ಲಿ ಆಗುತ್ತಿರುವ ಅನ್ಯಾಯ ತಡೆಗಟ್ಟಬೇಕು, ಪಡಿತರ ಹಂಚುವ ನ್ಯಾಯ ಬೆಲೆ ಅಂಗಡಿಗಳನ್ನು ವಿದ್ಯಾವಂತ ನಿರುದ್ಯೋಗಿಗಳಿಗೆ ಒದಗಿಸಬೇಕು, ಬಂಗಾರುಪೇಟೆಗೆ ಬಹುಪಯೋಗಿ ಕ್ರೀಡಾಂಗಣ ಹಾಗೂ ರಂಗ ಮಂದಿರ ಕಟ್ಟಿಸುವಂತೆ ಒತ್ತಾಯಿಸಲಾಯಿತು.

●

ಸಂತಾಪ

10-6-82 ರಂದು ಅವಿರತ ಮಳೆಯಿಂದಾಗಿ ಉಡುಪಿಯಲ್ಲಿ ನಡೆದ ಅನಾಹುತದಿಂದಾಗಿ ಸುಮಾರು ಹದಿನೆಂಟು ಜನಸಾವಿಗೀಡಾಗಿದುದಕ್ಕೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಸಂತಾಪ ವ್ಯಕ್ತಪಡಿಸುತ್ತದೆ.

ಹಾಗೇ ಹಾನಿಗೊಳಗಾದವರಿಗೂ, ಮೃತರ ಕುಟುಂಬದವರಿಗೂ ಸೂಕ್ತ ಪರಿಹಾರ ನೀಡಬೇಂದು ಸಿ. ಪಿ. ಐ. (ಎಂ) ಸರಕಾರವನ್ನು ಒತ್ತಾಯಿಸುತ್ತದೆ.

ಸಿ.ಪಿ.ಐ., ಸಿ.ಪಿ.ಐ. (ಎಂ) ಜಂಟೀ ಸಮಾವೇಶ

ಎಡ-ಪ್ರಜಾಪ್ರಭುತ್ವ ಪರ್ಯಾಯ ಬೆಳೆಸಲು ಕರೆ

ರಾಜ್ಯದ ರೈತ ಕಾರ್ಮಿಕರ ಹಾಗೂ ಇತರ ಜನಸಾಮಾನ್ಯರ ಮುಂದಿರುವ ಜ್ವಲಂತ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ಹಾಗೂ ಎಡ ಮತ್ತು ಪ್ರಜಾಪ್ರಭುತ್ವ ಪರ್ಯಾಯವನ್ನು ಕಟ್ಟುವ ಉದ್ದೇಶದಿಂದ ಎರಡೂ ಪಕ್ಷಗಳ ಜಂಟೀ ಸಮಾವೇಶವು 11-6-82 ರಂದು ಬೆಂಗಳೂರಿನ ರಾಜಮಹಲ್ ಹೋಟೆಲ್‌ನಲ್ಲಿ ಜರುಗಿತು. ಕಾಂ|| ಸಿ. ನಂಜುಂಡಪ್ಪ, ಎನ್.ಕೆ. ಉಪಾಧ್ಯಾಯ, ಬಿ. ವಿ. ಕಕ್ಕಿಲ್ಲಾಯ ಮತ್ತು ಕಾಂ|| ಎಂ. ಸಿ. ನರಸಿಂಹನ್ ಇವರ ಅಧ್ಯಕ್ಷೀಯ ಮಂಡಳಿಯ ನೇತೃತ್ವದಲ್ಲಿ ಸಮಾವೇಶ ಜರುಗಿತು.

ಆರಂಭದಲ್ಲಿ ಕಾಂ|| ಸೂರ್ಯನಾರಾಯಣರಾವ್ ಎರಡೂ ಪಕ್ಷಗಳ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಸಿ ಪಿ ಐ ಮುಖಂಡ ಕಾಂ|| ಎಂ. ಎಸ್. ಕೃಷ್ಣನ್ ಅವರು ಜಂಟೀ ಸಮಾವೇಶದ ಮುಖ್ಯ ಪ್ರಕಟಣೆಯನ್ನು ಮಂಡಿಸಿದರು.

ಸಮ್ಮೇಳನವನ್ನುದ್ದೇಶಿಸಿ ಕಾಂ|| ಪಿ. ರಾಮಚಂದ್ರರಾವ್, ಶಾಸಕ ಕಾಂ|| ಪಂಪಾಪತಿ, ಕೆ. ಆರ್. ನಾಯ್ಕ, ಸಿ. ಮುನಿರತ್ನಂ, ಮಹಮದ್ ಹಸನ್ ಖಾನ್, ಎಂ. ಸಿ. ವೆಂಕಟರಾವ್, ವಿ. ಎನ್. ಹಳಕಟ್ಟಿ, ಅರವಿಂದ ಮಳೆಬೆನ್ನೂರ, ವಿ.ಜೆ.ಕೆ. ನಾಯರ್, ಬಿ. ವಿ. ಕಕ್ಕಿಲ್ಲಾಯ, ಟಿ. ಎಸ್. ಅನಂತರಾಂ, ಎ. ಜೆ. ಮುಧೋಳ, ಟಿ. ಎಸ್. ಮಣಿ ಮತ್ತು ಕಾಂ|| ಸೋಮಸುಂದರ ಶರ್ಮ, ಅವರುಗಳು ಮಾತನಾಡಿದರು.

ಕಾಂ|| ಎಂ. ಕೆ. ಭಟ್ ಸಮಾರೋಪ ಭಾಷಣಮಾಡಿದರು. ಕಾಂ|| ಶ್ರೀನಿವಾಸಗುಡಿಯವರು ಅಭಾರ ಮನ್ನಿಸಿದರು.

ಸಮಾವೇಶದ ಅಂಗವಾಗಿ ಸಾಯಂಕಾಲ ಟೌನ್ ಹಾಲ್‌ನಲ್ಲಿ ಭಾರೀ ಬಹಿರಂಗಸಭೆ ನಡೆಯಿತು. ಅಧ್ಯಕ್ಷತೆಯನ್ನು ಕಾಂ| ಎಸ್. ಎಲ್. ಉಪಾಧ್ಯಾಯ ವಹಿಸಿದ್ದರು.

ಸಂಪಾದಕೀಯ

[1 ನೇ ಪುಟದಿಂದ]

ಯನ್ ಜನತೆಯ ಸಂಘಟನೆಯನ್ನೂ, ಅವರ ಹೋರಾಟವನ್ನೆ ಹತ್ತಿಕ್ಕುವುದು ಸಾಧ್ಯವಿಲ್ಲ ಎಂಬುದನ್ನು ಇಸ್ರಾಯೀಲ್ ತಿಳಿದಿರಬೇಕು.

ಇಡೀ ಜಾಗತಿಕ ಅಭಿಪ್ರಾಯವೇ ಇಸ್ರಾಯೇಲಿನ ವಿರುದ್ಧ ಇರುವುದಾದರೂ, ಇಸ್ರಾಯೀಲ್ ತಾನು ನಡೆಸುತ್ತಿರುವ ಆಕ್ರಮಣವನ್ನು ನಿಲ್ಲಿಸುತ್ತಿಲ್ಲ. ಇಸ್ರಾಯೀಲಿನ ಈ ಆಕ್ರಮಣಕಾರಿ ಯುದ್ಧ ಪಿಪಾಸಿ ನೀತಿಗೆ, ಸಾಮ್ರಾಜ್ಯ ವಿಸ್ತರಣೆಯ ಯೋಜನೆಗೂ ಅಮೇರಿಕನ್ ಸಾಮ್ರಾಜ್ಯಶಾಹಿಯ ಬೆಂಬಲವಿದೆ. ಇಸ್ರಾಯೇಲ್ ತನ್ನ ಆಕ್ರಮಣವನ್ನು ನಿಲ್ಲಿಸುವಂತೆ ತೋರ್ಕೆಯ ಮಾತನ್ನು ಅಮೇರಿಕನ್ ಸಂಯುಕ್ತ ಸಂಸ್ಥಾನದ ರೀಗನ್ ಸರಕಾರವು ಹೇಳುತ್ತಲಿದೆ ಯಷ್ಟೇ. ಅದೇ ಅಮೇರಿಕಾ ಸಂಯುಕ್ತ ಸಂಸ್ಥಾನವು ಜಾಗತಿಕ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಯುದ್ಧ ವಿರಾಮಕ್ಕೆ ಕರೆ ಕೊಟ್ಟಾಗ ತನ್ನ ವೀಟೋ ಹಕ್ಕನ್ನ ಉಪಯೋಗಿಸಿ, ಯುದ್ಧ ವಿರಾಮದ ಕರೆಯನ್ನು ಜಾರಿಯಾಗದಂತೆ ಮಾಡಿತು ! ಅಮೇರಿಕಾ ಸಾಮ್ರಾಜ್ಯಶಾಹಿಯ ಬೆಂಬಲದಿಂದಲೇ ಇಂದು ಇಸ್ರಾಯೇಲ್ ತನ್ನ ಯೋಜನೆಗಳನ್ನು ಜಾರಿಗೊಳಿಸುತ್ತಿದೆ.

ಜಗತ್ತಿನ ಎಲ್ಲಾ ಶಾಂತಿಪ್ರಿಯ ಜನತೆ ಇಸ್ರಾಯೇಲಿನ ನಗ್ನ ಆಕ್ರಮಣದ ವಿರುದ್ಧವೂ, ಅಮೇರಿಕಾ ಸಾಮ್ರಾಜ್ಯಶಾಹಿಯ ಪಿತೂರಿಯ ವಿರುದ್ಧವೂ ಪ್ರತಿಭಟನೆಯ ಕೂಗನ್ನೆಬ್ಬಿಸಬೇಕು. ಅರಬ್‌ರಾಷ್ಟ್ರಗಳೆಲ್ಲಾ ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ, ಪೆಲೆಸ್ತೀನಿಯನ್ ಜನತೆಗೆ ಬೆಂಬಲವಿತ್ತು, ಅವರಿಗಾಗಿರುವ ಅನ್ಯಾಯವನ್ನು ಹೋಗಲಾಡಿಸಲು ಮುಂದಾಗಬೇಕು.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office ;L-56, K. V. Temple Street ,Sultanpet, Bangalore-560 053.
Phone-24154. Printed at Ravee Traders, No. 8/1, J. M Lane, Balepet Cross, Bangalore-560 053. EDITOR ; M. K. BHAT.